ನೇಸರು

ತಿಂಗಳೋಲೆ

₹ 5/-

PAGES 24

DECEMBER 2020 | Nesaru Tingalole | Vol. XXXVIII - 12

ಹೇಮಂತ ಬಂದಿದ್ದಾನೆ, ತಣ್ಣನೆಯ ಮಂಜನ್ನು ತಂದಿದ್ದಾನೆ.

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2402 4647, 2403 7065

Email : mysoreassociation.mumbai@gmail.com

ಅಸೋಸಿಯೇಶನ್‌ನಲ್ಲಿ

ಕನಕದಾಸ ದಿನಾಚರಣೆ

ದಿನಾಂಕ 22.11.2020, ರವಿವಾರ ಮೈಸೂರು ಅಸೋಸಿಯೇಶನ್‌ನಲ್ಲಿ ಕನಕದಾಸರ ಜನ್ಮದಿನೋತ್ಸವ ಆಚರಣೆಯ ಅಂಗವಾಗಿ ವಿದುಷಿ ಶ್ರೀಮತಿ ಶ್ಯಾಮಲಾ ಪ್ರಕಾಶ್ ಅವರಿಂದ ಕನದಾಸರ ಕೃತಿ 'ಮೋಹನ ತರಂಗಿಣಿ'ಯ ಕುರಿತು ವಾಚನ ವ್ಯಾಖ್ಯಾನವನ್ನು ಆಯೋಜಿಸಲಾಗಿತ್ತು.

ಕಳೆದ 7–8 ತಿಂಗಳಿಂದ ಕೋವಿಡ್ ಪ್ರಸರಣೆಯನ್ನು ತಡೆಯಲು ಸರಕಾರ ಸಾರ್ವಜನಿಕ ಕಾರ್ಯಕ್ರಮಗಳಿಗೆ ತಡೆ ಹಾಕಿದ್ದನ್ನು ಸ್ವಲ್ಪಮಟ್ಟಿಗೆ ಸಡಿಲಿಸಿದ್ದರಿಂದ ಈ ಕಾರ್ಯಕ್ರಮವನ್ನು ಅಸೋಸಿಯೇಶನ್ ಆವರಣದಲ್ಲೇ ನಡೆಸುವುದೆಂದು ತೀರ್ಮಾನಿಸಲಾಗಿತ್ತು. ಅಂತೆಯೇ ಸಂಜೆ 5.40ಕ್ಕೆ ಕಾರ್ಯಕ್ರಮಕ್ಕೆ ಅಧ್ಯಕ್ಷೆ ಕಮಲಾ ಅವರು ಚಾಲನೆ ನೀಡಿದರು. ಕಳೆದ ಒಂದು ದಶಕಕ್ಕೂ ಮಿಕ್ಕು ಅಸೋಸಿಯೇಶನ್ ಕನಕದಾಸ ಜಯಂತಿಯನ್ನು ವಿವಿಧ ರೀತಿಯಲ್ಲಿ ಆಚರಿಸುತ್ತ ಬಂದಿದೆ ಎಂದು ತಿಳಿಸುತ್ತಾ ಈ ವರ್ಷದ ವಿವಿಧತೆ ಏನೆಂದರೆ ಈ ಕಾರ್ಯಕ್ರಮವನ್ನು ಆಸಕ್ತರು ಸಭಾಂಗಣದಲ್ಲಿ ಕುಳಿತು ವೀಕ್ಷಿಸಿ ಆಲಿಸುವುದಲ್ಲದೆ ಬರಲಾಗದವರು ಮನೆಯಲ್ಲೇ ಇದ್ದು ಗೂಗಲ್ ಮೀಟ್ ಅಥವಾ ಫೇಸ್ ಬುಕ್ ಮುಖಾಂತರ ಕೂಡ ನೋಡಿ ಆನಂದಿಸಬಹುದಾಗಿದೆ ಎಂದು ತಿಳಿಸಿದರು.

ಶ್ರೀಮತಿ ಶ್ಯಾಮಲಾ ಪ್ರಕಾಶ್ ಅವರು ಮೊದಲಿಗೆ ಕನಕದಾಸರ ಪರಿಚಯವನ್ನು ಸೂಕ್ಷ್ಮವಾಗಿ ಮಾಡಿಕೊಟ್ಟು ಯಾವ ಸಂದರ್ಭದಲ್ಲಿ ಅವರು 'ಮೋಹನ ತರಂಗಿಣಿ'ಯನ್ನು ಬರೆದಿರಬಹುದು ಎನ್ನುವದನ್ನು ತಿಳಿಸಿ ಬಹಳ ಸುಶ್ರಾವ್ಯವಾಗಿ 'ಅದರ ಮೊದಲ ಆ ಖ್ಯಾನವನ್ನು ಸಾಂಗತ್ಯ ಶೈಲಿಯನ್ನು ಹಾಡಿ ತೋರಿಸಿದರು. ಸಂಪೂರ್ಣ ಕಾವ್ಯ ಸಾಂಗತ್ಯ ಶೈಲಿಯಲ್ಲಿದ್ದು ಜಾನಪದಕ್ಕೆ ಹತ್ತಿರವಾಗಿರುವುದು ಎಂದು ತಿಳಿಸಿದರು. ಮುಂದೆ ಅಲ್ಲಲ್ಲೆ ಕೆಲವು ಚರಣಗಳನ್ನು ಹಾಡುತ್ತ 'ಮೋಹನ ತರಂಗಿಣಿ'ಯ ಪೂರ್ಣ ಕಥಾ ಭಾಗವನ್ನು ವಿವರಿಸಿದರು. ಕಾಲಾವಕಾಶವಿಲ್ಲದರಿಂದ ಹೆಚ್ಚು ಭಾಗದ ಕಾವ್ಯವನ್ನು ಓದುವುದಾಗಲಿಲ್ಲವೆಂದೂ, ಕಥೆಯ ಸ್ವಾರಸ್ಯವನ್ನು ವಿವರಿಸುವುದು ಅವರ ಉದ್ದೇಶವಾಗಿದ್ದು ರಸಿಕರು ಸ್ವತಃ ಕಾವ್ಯವನ್ನು ಓದಿ ಆನಂದಿಸಬೇಕೆಂದರು. ಶ್ರೀಮತಿ ಶ್ಯಾಮಲಾ ರಾಧೇಶ್ ವಂದನಾರ್ಪಣೆ ಮಾಡಿದರು.

ಕನ್ನಡ ರಾಜ್ಯೋತ್ಸವ ದಿನಾಚರಣೆ

ದಿನಾಂಕ 29.11.2020 ಅಸೋಸಿಯೇಶನ್‌ನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮೊದಲಿಗೆ ಶ್ರೀಮತಿ ಜ್ಯೋತಿ ಭಟ್ ಅವರ ಗಾಯನವಿತ್ತು. ಜ್ಯೋತಿಯವರು ಹಿಂದೂಸ್ತಾನಿ ಗಾಯನ ಶೈಲಿಯಲ್ಲಿ ಪರಿಣಿತಿ ಪಡೆದವರು, ಪುಣೆಯ ಗಂಧರ್ವ ಮಹಾವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರು ಹೆಚ್ಚಾಗಿ ಮುಂಬಯಿಯ ಕವಿಗಳ ಕವನಗಳನ್ನೇ ಆರಿಸಿಕೊಂಡಿದ್ದರು. ಸಗ್ಗದ ಸಿರಿ ಬಂತು ನಮ್ಮೂರಿಗೆ, ಏಳಿರಿ ಕನ್ನಡ ಜನ, ಕರಿ ಮುಗಿಲ ತೊಟ್ಟಿಲಲಿ ಮಲಗಿರುವ ಚಂದಿರನ, ಮೇಲೆ ಮುಗಿಲ ಅಂಗಳದಿ, ಕಣ್ಣು ಶುಭವ ಕಾಣಲಿ ಮುಂತಾಗಿ ಅಪರೂಪದ ಹಾಡುಗಳನ್ನು ಹಾಡಿದರು. ತಂದೆ ಗಜಾನನ ಯಾಜಿಯವರ ಗರಡಿಯಲ್ಲಿ ಪಳಗಿದವರು, ಅವರು ಹಾಕಿಕೊಟ್ಟ ಮಾರ್ಗದಲ್ಲೇ ಮುಂದುವರಿಯುತ್ತಿದ್ದಾರೆ. ಕಾರ್ಯಕ್ರಮ ಬಹಳ ಚೆನ್ನಾಗಿ ಕಳೆಗೂಡಿತು.

ನಂತರ ವಿದುಷಿ ಶ್ರೀಮತಿ ಶ್ಯಾಮಲಾ ರಾಧೇಶ್ ಅವರು ತಮ್ಮ ಮಕ್ಕಳಾದ ಕುಮಾರಿ ಮೈತ್ರಿ ಹಾಗೂ ಕುಮಾರಿ ಮಹತಿಯೊಡನೆ ಕರ್ನಾಟಕ ಶೈಲಿಯಲ್ಲಿ ಕನ್ನಡ ಹಾಡುಗಳನ್ನು ಹಾಡಿದರು. ಜಯಜಯ ಭುವನೇಶ್ವರಿ, ಅಂಗಳದೊಳು ರಾಮ, ಕನ್ನಡ ಎನೆ ಕುಣಿದಾಡುವುದೆನ್ನೆದೆ, ಐದು ಬೆರಳು ಕೂಡಿ, ಕಲ್ಲನಾಗರ ಕಂಡರೆ, ಅಮ್ಮ ಹಚ್ಚಿದೊಂದು ದೀಪ, ಜಯಹೇ ಕನ್ನಡ ತಾಯೆ, ಸೋಜುಗದ ಸೂಜಿ ಮಲ್ಲಿಗೆ ಮುಂತಾದ ಹಾಡುಗಳನ್ನು ಹಾಡಿ ರಂಜಿಸಿದರು. ಮಕ್ಕಳು ತುಂಬ ಚೆನ್ನಾಗಿ ಜೊತೆಯಲ್ಲಿ ಹಾಡಿ ಮುಂದೆ ತಾಯಿಯಂತೆಯೇ ಒಳ್ಳೆಯ ಕಲಾವಿದೆಯರಾಗುವ ಲಕ್ಷಣವನ್ನು ಹೊಂದಿರುವುದನ್ನು ತೋರಿಸಿಕೊಟ್ಟರು.

ಕಾರ್ಯದರ್ಶಿ ಡಾ. ಗಣಪತಿ ಶಂಕರಲಿಂಗ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ಲಕ್ಷ್ಮಿ ಸೀತಾರಾಮ್ ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮವೂ ಸಹ ಜಾಲತಾಣದಲ್ಲಿ ಫೇಸ್ ಬುಕ್ ಮತ್ತು ಗೂಗಲ್ ಮೀಟ್‌ನಲ್ಲಿ ಪ್ರಸಾರವಾಯ್ತು.

ಸಂಪಾದಕೀಯ

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

\- Ed.

****

ಸಂಪರ್ಕ ವಿಳಾಸ:

ನೇಸರು

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
☎24024647 / 24037065
Email:
Mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ

ಸಂಪುಟ 47 | ಡಿಸೆಂಬರ್–2020 | ಸಂಚಿಕೆ 12

ಉಭಯ ಸಂಕಟ

ಡಾ. ಜ್ಯೋತಿ ಸತೀಶ್

ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಉಭಯ ಸಂಕಟವನ್ನು ಅಥವಾ ಕಸಿವಿಸಿಯನ್ನು ಎದುರಿಸಿಯೇ ಇರುತ್ತಾರೆ. ನಮ್ಮ ಮುಂದೆ ಒಂದಲ್ಲ ಒಂದು ಪರಿಸ್ಥಿತಿ ನಿರ್ಮಾಣವಾಗಿಯೇ ಆಗುತ್ತದೆ. ಒಮ್ಮೊಮ್ಮೆ ಪರಿಸ್ಥಿತಿ ಯಾವ ರೀತಿ ಇರುತ್ತದೆ ಅಂದರೆ, 'ಬಿಸಿ ತುಪ್ಪದ ಹಾಗೆ' ಉಗುಳುವ ಹಾಗೂ ಇಲ್ಲ. ನುಂಗುವ ಹಾಗೂ ಇಲ್ಲ. ಕೆಲವರು ಹೊತ್ತಲ್ಲದ ಹೊತ್ತಿನಲ್ಲಿ ನಿಮಗೆ ಕರೆ ಮಾಡಬಹುದು. ಮೇಲಿಂದ ಕರೆ ಮಾಡಿ, ನಾನು ತೊಂದರೆ ಕೊಟ್ಟಿಲ್ಲವೆಂದು ಭಾವಿಸುತ್ತೇನೆ ಎಂದು ಕೂಡ ಹೇಳುತ್ತಾರೆ. ನಿಮಗೆ ಹೌದು ಅಥವಾ ಇಲ್ಲ ಅನ್ನೋ ಹಾಗೆ ಇಲ್ಲ. ಕಸಿವಿಸಿಯಲ್ಲಿ, ಅಯ್ಯೋ ಪರವಾಗಿಲ್ಲ ಬಿಡಿ. ಅದರಲ್ಲೇನಿದೆ ಅಂತ ನೀವು ನಿಮಗೆ ಉದಾರವಾದಿಗಳಾಗಬೇಕು. ಇನ್ನು ಕೆಲವರು ನಿದ್ದೆಯಲ್ಲಿರುವವರನ್ನು ಎಬ್ಬಿಸಿ, ನಿದ್ರೆ ಬಂತಾ? ಅಂತ ಕೇಳುವವರಿಗೆ ಏನು ಹೇಳಬೇಕು ಅಂತ ಅರ್ಥವಾಗುವುದಿಲ್ಲ. ಇನ್ನು ಎದುರುಮನೆಯವರು ಏನಾದರೂ ಹೊಸದಾಗಿ ತಿಂಡಿಯನ್ನು ಮಾಡಿದ್ದರೆ, ನಿಮಗೆ ಟೇಸ್ಟ್ ಮಾಡಿಸಲು ತಂದುಕೊಟ್ಟು, ಹೇಗಾಗಿದೆ ಅಂತ ನಿಮ್ಮಲ್ಲಿ ಕೇಳಿದಾಗ, ಒಳ್ಳೆದಾಗಿದ್ರೆ, ಹಾ ಒಳ್ಳೆಯದಾಗಿದೆ ಅಂತ ಹೇಳಬಹುದು. ಒಳ್ಳೆಯದಾಗಿಲ್ಲದಿದ್ದರೆ, ಚೆನ್ನಾಗಿಲ್ಲ ಅಂತ ಮುಖದ ಮೇಲೆ ಹೊಡೆದ ಹಾಗೆ ಹೇಗೆ ಹೇಳೋದು ಅಂತ ನೀವು ಕಸಿವಿಸಿಪಡಬಹುದು.

ಇನ್ನು ಕೆಲವರು ವಾರವಿಡಿ ಕೆಲಸಮಾಡಿ, ಭಾನುವಾರದ ರಜೆ ಬಂತೆಂದರೆ ಸಾಕು. ಆ ದಿನ ಬೆಳಿಗ್ಗೆ ತಡವಾಗಿ ಏಳಬೇಕು ಅಂದುಕೊಂಡಿರುತ್ತಾರೆ. ಆದರೆ ಆ ದಿನ ಏನಾದರೂ ಕೆಲಸ ಬಂದೆ ಬರುತ್ತದೆ. ಒಂದು ಐದು ನಿಮಿಷದ ಕೆಲಸ ಮಾಡ್ತೀರಾ ಅಂದ್ರೆ ಸಾಕು. ಎದ್ದಮೇಲೆ ಎದ್ದ ಹಾಗೆಯೇ. ಅದು ಐದು ನಿಮಿಷದ ಪ್ರಶ್ನೆಯೇ ಇಲ್ಲ. ಕೊನೆಗೆ ನಿರ್ವಾಹವಿಲ್ಲದೆ ಏಳಬೇಕಾಗುತ್ತದೆ.

ಮನೆಯಲ್ಲಿ ಹೆಚ್ಚಾಗಿ ಉಭಯ ಸಂಕಟಕ್ಕೆ ಒಳಗಾಗುವುದು ತಾಯಿಯಂದಿರು. ಗಂಡ ಮತ್ತು ಮಕ್ಕಳ ಜಗಳದಲ್ಲಿ, ಯಾರ ಪರ ವಹಿಸಿ ಮಾತನಾಡಬೇಕೆಂದು ಗೊತ್ತಾಗದೆ ಪೇಚಿಗೆ ಸಿಲುಕಿಕೊಳ್ಳುತ್ತಾರೆ.

ಈ ಸಂದರ್ಭದಲ್ಲಿ ನನಗೆ ಕುವೆಂಪು ಅವರ ಉಭಯ ಸಂಕಟ ಕವಿತೆಯ ಸಾಲುಗಳು ನೆನಪಾಗುತ್ತದೆ.

"ಹೇಳಿದರೆ ಹಾಳಾಗುವುದೋ ಈ ಅನುಭವದ ಸವಿಯು

ಹೇಳದಿರೆ ತಾಳಲಾರನೋ ಕವಿಯು!"

ಕುವೆಂಪು ಅವರ ಈ ಕವನದ ಸಾಲುಗಳು ಎಷ್ಟೊಂದು ಅರ್ಥಪೂರ್ಣವಾಗಿದೆಯಲ್ಲವೇ?'

ಇದೇ ಸಂದರ್ಭದಲ್ಲಿ ಕವಿ ಜಿ.ಎಸ್. ಶಿವರುದ್ರಪ್ಪನವರ "ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ, ಹಾಡುವುದು ಅನಿವಾರ್ಯ ಕರ್ಮವೆನಗೆ" ಎಂಬ ಕವನದ ಸಾಲುಗಳು ನೆನಪಾಗುತ್ತದೆ.

ಕಾವ್ಯಕರ್ಮ ಸಹಜವಾದದ್ದು ಮಾತ್ರವಲ್ಲ ನಿರಪೇಕ್ಷವಾದದ್ದು ಎನ್ನುವ ನಿಲುವನ್ನು ಜಿ.ಎಸ್. ಶಿವರುದ್ರಪ್ಪ ನವರು ಈ ಕವನದ ಸಾಲುಗಳ ಮುಖೇನ ವ್ಯಕ್ತಪಡಿಸಿದ್ದಾರೆ.

ಕವಿಯಲ್ಲಿ ಅಂತರ್ಗತ ವಾಗಿರುವ ಭಾವಗಳನ್ನು ಹೊರಹಾಕುವುದು ಎಷ್ಟೊಂದು ಕಷ್ಟದ ಕೆಲಸ. ಅದನ್ನು ಅನುಭವಿಸಿದವರಿಗೆ ಗೊತ್ತು. ಈ ಸುಂದರ ಅನುಭವದ ಸವಿಯನ್ನು ಯಾವ ರೀತಿಯಲ್ಲಿ ಹೊರ ಹಾಕಬೇಕು ಎನ್ನುವುದು ಕವಿಗಿರುವ ಸಮಸ್ಯೆ. ಭಾವಕ್ಕೆ ತಕ್ಕ ಪದಗಳು ವರ್ಣಿಸಲು ಸಿಗದಿದ್ದರೆ, ಆ ಸುಂದರ ಅನುಭವಗಳಿಗೆ ನ್ಯಾಯ ಸಿಗಬಲ್ಲುದೆ? ಎದೆಯೊಳಗೆ ಹುದುಗಿರುವ ಭಾವನೆಗಳನ್ನು ಹೊರಹಾಕದೇ ಕವಿಗೆ ಬೇರೆ ದಾರಿ ಇಲ್ಲ. ಭಾವಗಳನ್ನು ಹೊರ ಹಾಕಿದರೆ ಎಲ್ಲಿ ಆ ಅನುಭವದ ಸವಿಯು ಹಾಳಾಗುವುದೋ ಅನ್ನುವ ತುಡಿತವೂ ಕವಿಯಲ್ಲಿ ಕಾಣಬಹುದು. ಒಂದು ರೀತಿಯ ಉಭಯ ಸಂಕಟ ಕವಿಗೆ. ಜೀವನದಲ್ಲಿ ಇಂತಹ ಒತ್ತಡ ಅಥವಾ ಉಭಯಸಂಕಟದ ಮೂಸೆಯಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಹದವಾಗಿ ಬೇಯಲೇಬೇಕು. ಇದೇ ಬದುಕಲ್ಲವೇ!.

ಪ್ರಪಂಚ ಹೇಗೆ ಪ್ರಾರಂಭವಾಯಿತು?

✍ ಜಿ. ವಿ. ರಾವ್

ಆಕಾಶದಲ್ಲಿ ಆಮ್ಲಜನಕವು **(oxygen)** ಜಲಜನಕ **(Hydrogen)** ಜೊತೆ ಸೇರಿ ನೀರು ಆಯಿತು. ನೀರು ಸೂರ್ಯನ ಕಿರಣದ ತಾಪದಿಂದ ಆವಿಯಾಗಿ ನಂತರ ಮೋಡ ಹಾಗೂ ಮಳೆಯಾಗಿ ಭೂಮಿ ಮೇಲೆ ಬೀಳುತ್ತದೆ. ಮಳೆ ನೀರಿನಿಂದ ಪೈರು, ಪಚ್ಚೆ, ಮೀನು, ಪಕ್ಷಿ, ಪ್ರಾಣಿ ಮತ್ತು ಮನುಷ್ಯ ರಾಗಿ ಕಾಣಿಸಿಕೊಳ್ಳುತ್ತಾರೆ. ಮನುಷ್ಯ ತನ್ನ ಆಸೆ ಪೂರೈಸಿ ಸ್ಥಿತಃ ಪ್ರಜ್ಞ ನಾಗುವ ವರೆಗೂ ಪುನರ್ಜನ್ಮ ಪಡೆಯುತ್ತಿರುತ್ತಾನೆ. ಸ್ಥಿತಃ ಪ್ರಜ್ಞ ನಾದ ಮೇಲೆ ಇತರ ಜನರಿಗೆ ತಿಳಿವಳಿಕೆ ಕೊಡುವ ಪ್ರಯತ್ನ ಮಾಡುತ್ತಾನೆ.

ಇತ್ತೀಚೆಗೆ ವಿಜ್ಞಾನಿಗಳು ಬಹಳ ಪರಿಶೋಧನೆಗಳನ್ನು ಮಾಡಿ ನಾವು ವಾಸಿಸುತ್ತಿರುವ ಭೂಮಂಡಲದಂತೆಯೇ ಇರುವ ಇನ್ನೂ ಎರಡು ಜಗತ್ತುಗಳಿರುವ ಸಾಧ್ಯತೆಯನ್ನು ಕಂಡುಹಿಡಿದಿದ್ದಾರೆ. ಇನ್ನೂ ಎಷ್ಟು ಜಗತ್ತುಗಳಿವೆಯೋ ಗೊತ್ತಿಲ್ಲ. ಅಲ್ಲದೆ ಆಕಾಶದಲ್ಲಿ ಕಾಣುವ ನಕ್ಷತ್ರಗಳು ಒಟ್ಟು ಎಷ್ಟು ಇವೆ ಎನ್ನುವುದೂ ಗೊತ್ತಿಲ್ಲ. ॐನ ಸಕಲ ಕಾರ್ಯಗಳನ್ನೂ ನೋಡಿಕೊಳ್ಳುವ ಕೆಲಸವನ್ನು ಅದ್ಭುತ ಶಕ್ತಿಯಿರುವ ಹಾಗೂ ವಿಶಾಲವಾದ ಕಣ್ಣು, ಕಿವಿ, ಮೂಗು ಮತ್ತು ಮೆದುಳು ಪಡೆದಿರುವ ಸಾಕಾರ ಬ್ರಹ್ಮ ಗಣೇಶ (ಗಣಗಳ ಈಶ) ನನ್ನು ನಿರ್ಮಿಸಿರುವರು.

ಪ್ರಾಣಿಗಳು ಹಾಗೂ ಮನುಷ್ಯರ ನಡುವೆ ಇರುವ ವ್ಯತ್ಯಾಸವೇನು?

ಭೂಮಿಯ ಮೇಲೆ ಕ್ರಿಮಿ, ಕೀಟಗಳು; ಮೀನುಗಳು, ಪಕ್ಷಿಗಳು, ಪ್ರಾಣಿಗಳು, ಎಲ್ಲಾ ಜೀವರಾಶಿಗಳ ಮೊತ್ತ ೮೪ ಲಕ್ಷ ಎಂದು ತಿಳಿದು ಬಂದಿದೆ. ಪ್ರಾಣಿಗಳಲ್ಲಿ ಮನುಷ್ಯನೇ ಅಂತ್ಯದ ಜೀವಿ. ಮನುಷ್ಯನಿಗೆ ಮಾತ್ರ (ಅಂದರೆ ಬೇರೆ ಯಾವ ಪ್ರಾಣಿಗೂ ಇಲ್ಲದ) ಅಪರೋಕ್ಷ ಜ್ಞಾನ ಪಡೆಯುವ ೩ನೇ ಕಣ್ಣು ಮತ್ತು ಅದನ್ನು ಉಪಯೋಗಿಸುವ ಶಕ್ತಿಯನ್ನು ಪರಮಾತ್ಮನು ದಯ ಪಾಲಿಸಿದ್ದಾರೆ.

3 ಕಣ್ಣುಗಳ ವೈಶಿಷ್ಟ್ಯವೇನು?

ದಾರಿಯಲ್ಲಿ ಹೋಗುತ್ತಿರುವಾಗ ಒಂದು ಪ್ರಾಣಿಯು ಎದುರಿಗೆ ಬಂದಾಗ, ಒಂದು ಕಣ್ಣಿರುವವರು ನೋಡಿದಾಗಲೂ ಅದು ನಾಯಿಯೆಂದು ಗುರುತಿಸಿರುತ್ತಾರೆ. ಎರಡು ಕಣ್ಣಿರುವವರು ನೋಡಿದಾಗಲೂ ನಾಯಿಯು ಎಷ್ಟು ದೂರದಲ್ಲಿದೆ ಎನ್ನುವ ವಿಚಾರ ಮತ್ತು ಅದರ ಕತ್ತಿಗೆ ಪಟ್ಟಿ ಇರುವುದಾ ಅಥವಾ ಇಲ್ಲವಾ ಎನ್ನುವ ವಿಚಾರ ಗಮನಿಸಲಾಗುತ್ತದೆ. ನಂತರ ಕತ್ತಿಗೆ ಪಟ್ಟಿ ಇಲ್ಲದಿರುವಾಗ ಬೀದಿನಾಯಿ, ಆ ತರಹದ ನಾಯಿಗಳು ಸಾಮಾನ್ಯವಾಗಿ ಹಾನಿ ಮಾಡುವ ಸಾಧ್ಯತೆಯನ್ನು ೩ನೇ ಕಣ್ಣಿನಿಂದ ಗಮನಿಸಿ, ಆ ನಾಯಿಯಿಂದ ದೂರ ಹೋಗುವ ತೀರ್ಮಾನ ಮಾಡಿ, ಬೇರೆ ದಾರಿಯಲ್ಲಿ ಪ್ರಯಾಣಿಸುವುದು ವಾಡಿಕೆ. ಅಂದರೆ 3 ನೇ ಕಣ್ಣಿನಿಂದ ಜ್ಞಾಪಕ ಶಕ್ತಿ, ಆಲೋಚನಾಶಕ್ತಿ, ತೀರ್ಮಾನಿಸುವ ಶಕ್ತಿ ಇತ್ಯಾದಿಗಳು ಬರುತ್ತವೆ.

3ನೇ ಕಣ್ಣಿನ ಉಪಯೋಗವೇನು?

3ನೇ ಕಣ್ಣಿನ, 9 ಕೆಳಗೆ ಸೂಚಿಸಿರುವ ಶಕ್ತಿಗಳನ್ನು ಸರಿಯಾಗಿ ಉಪಯೋಗಿಸಿ ಸದಾನಂದ ಸುಖ ಪಡೆಯುವ ಸಾಧ್ಯತೆ ಇದೆ.

1. ಜ್ಞಾಪಕ ಶಕ್ತಿ - Memory Power. ಹಿಂದೆ ನಡೆದ ವಿಚಾರಗಳ ನೆನಪು
2. ಸಾಧಿಸಬೇಕಾದ ಗುರಿಯ ತೀರ್ಮಾನ - Fixing the Goal to be acheived
3. ಗುಣ ಪಡೆಯುವ ವಿವಿಧ ದಾರಿಗಳು - Different alternatives to reach goal.
4. ಸೂಕ್ತ ದಾರಿಯನ್ನು ಗುರುತಿಸುವುದು - Establishing the right path

5. ದಾರಿಯಲ್ಲಿ ಬರಬಹುದಾದ ಅಡಚಣೆಗಳನ್ನು ಗುರುತಿಸುವುದು - Rodar effect

6. ಅಡಚನೆಗಳಿಂದ ತಪ್ಪಿಸಿಕೊಳ್ಳುವ ಮಾರ್ಗ ಕಂಡುಹಿಡಿಯುವುದು - Rudder effct

7. ಚಲಿಸುವ ವೇಗವನ್ನು ಹಿಡಿತದಲ್ಲಿಡುವುದು - Anchor effect

8. ಇತರರು ಅನುಭವಿಸುತ್ತಿರುವ ಸುಖ / ದುಃಖಕ್ಕೆ ಕಾರಣವನ್ನು ಕಂಡುಹಿಡಿದು, ತಾನು ಅವರ ಕೆಟ್ಟಗುಣಗಳನ್ನು ಹಿಡಿಯದೆ, ಅವರ ಒಳ್ಳೆಗುಣಗಳನ್ನು ಅನುಸರಿಸಿ ಮುಂದುವರೆಸುವ ಸಾಧ್ಯತೆ ಇದೆ.

9. ಮುಂಜಾಗ್ರತೆ (foresight) ಹಾಗೂ ಮನಸ್ಥೈರ್ಯ (fortitude) ಪಡೆಯುವ ಸಾಧ್ಯತೆ.

ಪರಮಾತ್ಮ ನನಗೆ ಏಕೆ ಮನುಷ್ಯ ಜನ್ಮ ಕೊಟ್ಟಿದ್ದಾನೆ?

ಈ ಜನ್ಮದಲ್ಲಿ ನಾನು ದೇವ ಋಣ, ಪಿತೃ ಋಣ, ಋಷಿ ಋಣಗಳನ್ನು ಕಳೆದುಕೊಂಡು ಪರಬ್ರಹ್ಮನ ಬಗ್ಗೆ ಸ್ವಲ್ಪ ವಾದರೂ ತಿಳಿವಳಿಕೆ ಪಡೆಯಲೆಂದು ಇಲ್ಲಿರುವೆನು.

"ಋಣ' ಅಂದರೆ ಏನು?

ಕನ್ನಡ ನಿಘಂಟುವಿನ ಪ್ರಕಾರ "ಋಣ" ಅಂದರೆ ಸಾಲ , ಹಂಗು, ಉಪಕಾರ.

"ಋಣ ಅನುಬಂಧ" ಅಂದರೆ ಪೂರ್ವಜನ್ಮದ ಲೆಕ್ಕಾಚಾರ. "ಋಣತ್ರಯ" ಅಂದರೆ ದೇವ, ಪಿತೃ, ಋಷಿಗಳಿಗೆ ಸಲ್ಲಬೇಕಾದ ಸಾಲ.

ಮಗುವಿನ ಜನನದಿಂದ ಅದರ ತಂದೆ-ತಾಯಿ; ಅಣ್ಣ-ತಮ್ಮ; ಅಣ್ಣ-ತಂಗಿ, ಇತರ ಸಂಬಂಧಿಗಳಲ್ಲದೆ, ಸ್ನೇಹಿತರು, ಹಿತೈಷಿಗಳು, ವಿವಾಹ ಸಂಬಂಧಿಗಳು ಇತ್ಯಾದಿಗಳೆಲ್ಲರ ಜೊತೆಯ ಸಾಲ ಸೋಲ ಗಳನ್ನು ತೀರಿಸಿಕೊಳ್ಳುವ ಸಂದರ್ಭ ಬಂದಿದೆ.

ಜನನ ಹಾಗೂ ಮರಣದ ವೈಶಿಷ್ಟ್ಯವೇನು?

ಮನುಷ್ಯ ಜೀವದ ಬೆಳವಣಿಗೆಯನ್ನು ಕೆಳಗೆ ಸೂಚಿಸಿದೆ.

ಅಂತಸ್ತು	ಹೊಸದಾಗಿ ಅಂಟಿಕೊಳ್ಳುವ ಆಸೆಗಳು	ಮಾಯವಾಗುವ ವಾಸನೆಗಳು	ಜೀವದ ಆಕಾರ
ಶಿಶು	ಪೂರ್ವಜನ್ಮದ ವಾಸನೆಗಳು + ನನ್ನ ಅಪ್ಪ ಅಮ್ಮ ಇತ್ಯಾದಿ (ಅಹಂಕಾರ)	-	ॐ
ವಿದ್ಯಾರ್ಥಿ	ನಾನು ಓದಿದ್ದೇನೆ (-) ಅಹಂ ಭಾವ	-	ॐ
ಗೃಹಸ್ಥ	ನನ್ನ ಅಸ್ತಿಗಳು (-) ಕರ್ತೃತ್ವ + ಬೋಕ್ತೃತ್ವ		ॐ
ವಿರ್ವೇ	ಪರೋಪಕಾರ ಬುದ್ಧಿ + ಘಟ ಸಂಪತ್ತು ಅರಿಷಟ್ ಗುಣಗಳು)-		
ವೈರಾಗಿ	+(ತೃಪ್ತಿ)	(ಕರ್ತೃತ್ವ + ಬೋಕ್ತೃತ್ವ) -	ॐ
ಜ್ಞಾನಿ	ಸದಾನಂದ ಸ್ಥಿತಿ	(ಅಜ್ಞಾನ) _	ॐ

ಮರಣವು ಯಾವಾಗ ಬೇಕಾದರೂ ಆಗಬಹುದು. ಆ ಸಮಯದಲ್ಲಿ ಜೀವವು ತನಗೆ ಅಂಟಿಕೊಂಡ ವಾಸನೆಗಳೊಂದಿಗೆ ಹೊಸ ಶರೀರದಲ್ಲಿ ಪ್ರವೇಶ ಮಾಡಿ ಅಲ್ಲಿ ಜೀವನ ಮುಂದುವರೆಸುತ್ತದೆ. ಜ್ಞಾನಿಗಳ ಜೀವವು ವಿಷ್ಣು ಪಾದ ತಲಪುತ್ತದೆ.

ಆಶ್ರಮ – ಮಠ

✍ ಡಾ. ಮಂಜುನಾಥ್

ಮೊಟ್ಟಮೊದಲು, ನಮ್ಮ ನಾಡಿನಲ್ಲಿ ಮಕ್ಕಳ ವಿದ್ಯಾಭ್ಯಾಸ, 7ನೆಯ ವರ್ಷದವರೆಗೆ, ಮನೆಯಲ್ಲಿಯೇ ತಂದೆ ತಾಯಿ ಮಾಡಿಸಿ, ಆಮೇಲೆ ಮಗುವನ್ನು ಹೆಚ್ಚು ಕಲಿಕೆಗಾಗಿ ಒಬ್ಬ ಗುರುವಿನ ಮನೆಗೆ ಕಳುಹಿಸುತ್ತಿದ್ದರು. ಅಲ್ಲಿ ಆ ಮಗು, 16ನೆಯ ವಯಸ್ಸಿನವರೆಗೆ ಅಲ್ಲಿ ಕೆಲವು ವಿದ್ಯೆಗಳನ್ನು ಕಲಿತು, ನಂತರ ಹಿಂತಿರುಗಿ ಮನೆಗೋ ಇಲ್ಲಾ ಹೆಚ್ಚು ಕಲಿಯಲು ಕಾಶಿಗೋ ಹೋಗುತ್ತಿತ್ತು. ಬಂದ ಮಕ್ಕಳು, ಆ ಗುರುವಿನ ಹೆಸರು ಎಷ್ಟು ಹೆಚ್ಚಾಗಿರುತ್ತಿತ್ತೋ, ಅಷ್ಟಿರುತ್ತಿದ್ದರು. ಇಂದಿನ ರೀತಿಯಲ್ಲಿಯೇ, ಅಲ್ಲಿಯೂ ಕಲಿಕೆಗಾಗಿ ಎಡೆ ಸಿಗುವುದು, ಅಷ್ಟೇನೂ ಸಲೀಸಾಗಿರುತ್ತಿರಲಿಲ್ಲ. ಏಕೆಂದರೆ ಆ ಮಕ್ಕಳನ್ನು ಸಾಕಲು, ಆ ಗುರು ಹೆಚ್ಚಿನ ಕಾಳು, ಆಕಳುಗಳನ್ನು ಹೊಂದಿರಬೇಕಾಗುತ್ತಿತ್ತು. ಇದಕ್ಕೆ ನೆರವಾಗಿ, ಆ ಗುರುವಿನ ಬಳಿ ಕಳಿಸುತ್ತಿದ್ದ ಮಕ್ಕಳ ತಂದೆಗಳೂ ದಾನ ನೀಡುತ್ತಿದ್ದರು. ಇದರಲಿ ಬ್ರಾಹ್ಮಣರ ಕೊಡುಗೆ ಬಹಳ ಕಡಿಮೆ ಇದ್ದು, ಕ್ಷತ್ರಿಯರದ್ದೇ ಹೆಚ್ಚಿರುತ್ತಿತ್ತು. “ವಸಿಷ್ಠ” ನಂತೂ “ವಸ್ತುಗಳನ್ನೇ ಉಳ್ಳವನಾಗಿದ್ದರಿಂದ”, “ವಸಿಷ್ಠ” ಎಂಬ ಬಿರುದು ಹೊತ್ತಿದ್ದ. ಅವನಿಗೆ ಇಂದ್ರನೇ “ನಂದಿನಿ” ಎಂಬ ಕಾಮಧೇನುವನ್ನಿತ್ತಿದ್ದ.

ಬೆಳಗಾಗುವ ಮುನ್ನವೇ ಎದ್ದು, ಮಕ್ಕಳು ಆ ಕೊಟ್ಟಿಗೆಯ ಕೆಲಸವನ್ನೆಲ್ಲಾ ಮಾಡಿ, ಆಕಳು–ಕರುಗಳಿಗೆ ಮೇವನ್ನಿತ್ತು, ಹಾಲು ಕರೆದು, ಗುರು–ಪತ್ನಿಯರಿಗೆ ಇತ್ತು, ನಂತರ ಸೂರ್ಯೋದಯದ ಮುಂದೆ ಸ್ನಾನ ಮಾಡಿ, ಸಂಧ್ಯಾದಿಗಳನ್ನು ಮುಗಿಸಿ, ನಂತರ ಆ ಆಕಳುಗಳನ್ನು ಮೇವಿಗೆ ಕಳಿಸಿ, ಅಂದಿನ ಪಾಠಗಳನ್ನು ತಲೆಯಲ್ಲಿ ತಿರುವಿ ಹಾಕಿ, ಗುರುವಿನ ಬರುವಿಗೆ ಕಾಯುತ್ತಾ ಕುಳಿತಿರುತ್ತಿದ್ದರು.

ಈಗ ಶಾಲೆಗೆ ಹೋಗುವ ಮಕ್ಕಳ ಕೈಯಲ್ಲಿ, ತರಗತಿಯನ್ನು ಚೊಕ್ಕಟ ಮಾಡಲು, ಕಸಪೊರಕೆಯನ್ನು ಇತ್ತರೆ, ದೊಡ್ಡ ಕೋಲಾಹಲವೇ ಆಗುವುದು. ಆದರೆ ಆ ಕೊಟ್ಟಿಗೆ ತಮ್ಮನ್ನು “ಆಶ್ರಯಿಸುವ” ಒಂದು ನೆಲೆಯಾಗಿದ್ದರಿಂದ, ಮಕ್ಕಳು ನಲಿವಿನಿಂದ ಆ ಕೊಟ್ಟಿಗೆಯ ಕೆಲಸವನ್ನು ಮಾಡುತ್ತಿದ್ದರು. ಈ “ಆಶ್ರಯ” ಕ್ಕೇ “ಆಶ್ರಮ” ಎಂಬ ಹೆಸರು ಬಂತು. ಈಗ “ಗೋತ್ರ” ದ ಬಗ್ಗೆ ತುಂಬಾ ಚರ್ಚೆಯಾಗುತ್ತಿದೆ. “ಗೋತ್ರ” ವೆಂದರೆ “ಗೋ–ತ್ರ”, “ಗೋವುಗಳಿರುವ – ಸತ್ರ” ಎಂದೇ! ಕನ್ನಡದಲ್ಲಿ “ಆಕಳ–ಕೊಟ್ಟಿಗೆ”. ಈ ಆಶ್ರಮದ ಕೊಟ್ಟಿಗೆಯಲ್ಲಿರುವ ಆಕಳ ಹಾಲು ಕುಡಿದು ಬೆಳೆದ ಮಕ್ಕಳೆಲ್ಲಾ, ಆ ತಾಯಂದಿರ ಮಕ್ಕಳೇ. ತಮಗೆ ತಿಳಿವನ್ನಿತ್ತು ಮತ್ತೆ ಇನ್ನೊಮ್ಮೆ ಹುಟ್ಟು ಇತ್ತ, ಆ ಗುರುವೇ “ತಂದೆ” ಎಂದು ಈ ಮಕ್ಕಳು ಆ “ಕೊಟ್ಟಿಗೆ” ಯ ಹೆಸರನ್ನೇ ತಮ್ಮ “ತಿಳಿವಿನ ಕುಲ” ವಾಗಿ ಇಟ್ಟುಕೊಂಡರು. ಈಗ “ವಸಿಷ್ಠ” ಗೋತ್ರವೆಂದರೆ ವಸಿಷ್ಠನ ವಂಶಜರಲ್ಲ. ಆದರೆ ಆ ವಸಿಷ್ಠನ ತಿಳಿವಿಗೆ “ಅಧಿಕಾರಿಗಳಾದವರು” ಎಂದು. ಅಲ್ಲಿದ್ದ ಎಲ್ಲಾ ಮಕ್ಕಳು ಈ ರೀತಿಯಲ್ಲಿ ಒಡಹುಟ್ಟಿದವರಾದರು. ಇದು “ಆಶ್ರಮ” ದ ನೆಲೆ. ಇಂದು Oxford, Boston University ಗಳಲ್ಲಿ ಓದಿದವರೆಲ್ಲಾ, ನಾನು ಒಬ್ಬ Oxfordinan ಅಥವಾ Smithsonian ಎಂದು ಹೇಳಿಕೊಳ್ಳುವ ರೀತಿಯಲ್ಲಿಯೇ ನಾನು “ಆ ಗೋತ್ರ” ದವನು ಎಂದು ಹೇಳಿಕೊಳ್ಳುವುದು Oxford ಎಂದರೂ ಕೂಡ “ಗೂಳಿಗಳ ಕೊಟ್ಟಿಗೆ” ಎಂದೇ. ಹೀಗಾಗಿ ಪ್ರತಿಯೊಂದು ಆಶ್ರಮವೂ ಕೂಡ ಹಿಂದಿನ ಒಂದು ವಿಶ್ವವಿದ್ಯಾಲಯವೇ! ಆದರೆ ಇದು ಯಾರ ಒಬ್ಬನ ಸ್ವತ್ತಾಗಿರಲಿಲ್ಲ.

ಮುಂದೆ, ಬೌದ್ಧರ ಕಾಲದಲ್ಲಿ, ಈ ಆಶ್ರಮಗಳೇ ಹೆಚ್ಚಿನ ರಾಜ ಸವಲತ್ತು–ಬೆಂಬಲಗಳನ್ನು ಪಡೆದು, ವಿಹಾರಗಳ ಪಕ್ಕದಲ್ಲಿಯೇ, ದೊಡ್ಡ ವಿದ್ಯಾಶಾಲೆಗಳಾದವು. ನಲಂದಾ, ತಕ್ಷಶಿಲಾದಲ್ಲಿ ಇದ್ದ ಈ ಆಶ್ರಮಗಳಿಗೆ, ಪರದೇಶಗಳಿಂದಲೂ ಮಕ್ಕಳು ಕಲಿಯಲು ಬರುತ್ತಿದ್ದರು. ಇದರಿಂದ ಈ ಶಾಲೆಗಳ ಹೆಸರು ಬೆಳೆಯಿತು.

ಶಂಕರಾಚಾರ್ಯರು, ತಮ್ಮ ದೇಶ ಪರ್ಯಟನೆಯಲ್ಲಿ ಕಂಡಿದ್ದೇನೆಂದರೆ, ಸನಾತನ ಧರ್ಮದ ಬಗ್ಗೆ, ಜನರಿಗೆ ತಿಳಿವಳಿಕೆ ಕಡಿಮೆಯಾಗಿದ್ದುದು. ಜನರು ತಮ್ಮ ದಿನನಿತ್ಯದ ಕರ್ಮದಲ್ಲಿಯೇ ತೊಡಗಿ, ಆ ಪರಾವಿದ್ಯೆಯನ್ನು ಕಲಿಯುವ ಬಗೆಯಿಂದ ದೂರವಾಗಿದ್ದರು.

ಆತ್ಮಜ್ಞಾನವಿಲ್ಲದ ಮನುಷ್ಯ, ಇನ್ನಾವ ಜ್ಞಾನವನ್ನೂ ಅರಿಯಲು ತಕ್ಕವನಲ್ಲ. ಬೇರೆ ವಿದ್ಯೆಗಳು, "ಅಹಂ" ಎನ್ನುವುದನ್ನು ಹೆಚ್ಚಿಸಿ, ವಿನಾಶಕ್ಕೆ ಕಾರಣವಾಗುವುದು ಎಂದು ಅವರು ಅರಿತಿದ್ದರು. ಇದಕ್ಕಾಗಿ ಅವರು ದೇಶದ ನಾಲ್ಕೂ ಮೂಲೆಗಳಲ್ಲಿ, ನಾಲ್ಕು "ಶಾರದಾ" ಪೀಠಗಳನ್ನು ಸ್ಥಾಪಿಸಿದರು. "ಶಾರದಾ" ಎಂದರೆ "ತಿಳಿವನ್ನು ಈಯುವವಳು" ಎಂದು. ಇದು ಒಂದು ದೇವತೆ ಅಲ್ಲ, ಕೇವಲ ಒಂದು ಸಂಕೇತ, ಲಿಂಗದ ಮಾದರಿಯಲ್ಲ. ಆದಿಶಂಕರ ಗುರಿ, ಈ ಪೀಠಗಳು ತಿಳುವಳಿಕೆಯನ್ನು ಹರಡುವ ಕೇಂದ್ರಗಳಾಗಲಿ ಎಂದು. "ಮಠ" ವೆಂದರೆ ಸನ್ಯಾಸಿಯ "ಗುಡಿಸಲು" ಎಂದು. ಸನ್ಯಾಸಿ ಊರಿನಲ್ಲಿರದೆ, ಊರಿನ ಹೊರಗೇ ಇದ್ದು, ತಿರಿದು–ತಿಂಬ ಬೇಕೆಂದು ಸನ್ಯಾಸಾಶ್ರಮದ ಗುರಿ. ಆದ್ದರಿಂದ ಈ "ಮಠ" ಊರ ಹೊರಗೆ, ಸಂಸಾರಸ್ಥರಿಂದ ದೂರವಿದ್ದು, ಯಾವ "ನ್ಯಾಸ" ವನ್ನು ಇಟ್ಟುಕೊಳ್ಳದಿರುವುದು ಸನ್ಯಾಸ ಧರ್ಮ.

ಆದರೆ ಕಾಲಕ್ರಮೇಣದಲ್ಲಿ ಈ ಮಠಗಳಿಗೆ ರಾಜರಿಂದ ದತ್ತಿಯಾಗಿ ನೆಲ–ಹೊಲಗಳು ಬಂದು, ಅದನ್ನು ನೋಡಿಕೊಳ್ಳಲು ಈ ಸನ್ಯಾಸಿಗೆ ಆಗದೆ, ಅಲ್ಲಿ ಸಂಸಾರಸ್ಥರು ಬಂದು ನೆಲೆಸಿದರು. ಎಲ್ಲಿ ಸಂಸಾರಸ್ಥರು ಬಂದು ನೆಲೆಸುತ್ತಾರೋ ಅಲ್ಲಿ "ಸಂಸಾರ" ಬೆಳೆಯುತ್ತದೆ. ಇಂದು ಎಲ್ಲಾ ಮಠಗಳೂ ಕೂಡ ಈ ಪರಿವಾರಗಳ ಆಸ್ತಿಯಾಗಿ ಹೋಗಿವೆ. ಈ ಗುರುವಿನ ನಂತರ ಯಾರಪ್ಪಾ? ಎನ್ನುವ ಪ್ರಶ್ನೆಯೇ ಏಳದ ಹಾಗೆ, ಈಗಿರುವ ಗುರುವಿನ ತಂಗಿಯ ಅಥವಾ ತಮ್ಮನ ಮಕ್ಕಳು ಅಣಿಯಾಗಿ ನಿಂತಿರುತ್ತಾರೆ. ಈಗ ಭಾರತದಲ್ಲಿ, ಈ ಪರಿವಾರ ಧರ್ಮಕ್ಕೆ ಹೊರತಾಗಿರುವ ಒಂದೇ ಒಂದು "ಮಠ" ಇಲ್ಲ. ಹೊಸ ಹೊಸ ಮಠಗಳನ್ನು ಕಟ್ಟಿಕೊಂಡು, ಆಶಾರಾಮ್ ಬಾಪು, ರಾಮ್ ರಹೀಮ್, ನಿತ್ಯಾನಂದ ಗಳು ಮೈ ಎತ್ತುತ್ತಿದ್ದಾರೆ. ಶೃಂಗೇರಿ ಮಠದಲ್ಲಿ ಮಾಧವ ವಿದ್ಯಾರಣ್ಯರಾಗಿ ಬಂದ ನಂತರ, ಆ ಮಠ, ಕರ್ನೂಲು ಜಿಲ್ಲೆಯ ಬ್ರಾಹ್ಮಣ ಕುಲದ ಮಠವಾಗಿ ಹೋಗಿದೆ. ಅಲ್ಲಿ ಗುರುಗಳು, ಮನೆವಾರ್ತೆಯವರು, ಗುರುಗಳ ಸಲಹೆಗಾರರು ಎಲ್ಲರೂ ಈ ಜಿಲ್ಲೆಯಿಂದಲೇ ಕಳೆದ 700 ವರ್ಷಗಳಿಂದ ಬರುತ್ತಿದ್ದಾರೆ. ವೀರಶೈವ ಮಠಗಳಲ್ಲಿ ಈ ಪರಿಪಾಠ ಹಿಂದಿನಿಂದ ಬಂದಿದೆ. ಅವರಲ್ಲಿಯೂ ಜಾತಿಗಳಿರುವುದರಿಂದ, ಈಗ "ಮಡಿವಾಳ–ಮಾದಯ್ಯ" ನಿಗೆ ಅಲ್ಲಿ ಎಡೆ ಇಲ್ಲ.

ಈಗ ಎಲ್ಲೆಡೆಯಲ್ಲಿಯೂ, ಮತದಾರರ ಸಂಖ್ಯೆ ಎಷ್ಟಿದೆ ಎಂಬುದರ ಮೇಲೆಯೇ ಕಣ್ಣಿರುವುದರಿಂದ, ನಮ್ಮ ಕೋಮಿನವರ "ಮಠ" ಗಳು ಇಲ್ಲದಿದ್ದರೆ, ಬೇರೊಂದು "ಮಠ" ವನ್ನು ಕಟ್ಟಲು ರಾಜಕಾರಣಿಗಳು ಮುಂದಾಗುತ್ತಿದ್ದಾರೆ. ಹೀಗಾಗಿ, ಒಕ್ಕಲಿಗರ ಮಠ, ವೈಶ್ಯರ ಮಠ, ದೇವಾಂಗದವರ ಮಠಗಳು ಹುಟ್ಟಿಕೊಂಡಿವೆ. ಅಲ್ಲಿ ನಾವು ಹೇಳಿದಂತೆಯೇ ಕೇಳುವ, ಒಬ್ಬ "ಸ್ವಾಮಿ" ಯನ್ನು ರಾಜಕಾರಣಿಗಳು ತಂದು ಕೂರಿಸುತ್ತಾರೆ. ಆತನಿಗೆ ಸನ್ಯಾಸ ಬೇಡದಿದ್ದರೂ ಪಟ್ಟ ಬೇಕಿರುವುದರಿಂದ, ಆಮೇಲೆ ಬೇರೆ ವಾಸನೆಗಳೂ ನಿತ್ಯಾನಂದನ ಮಾದರಿ ಅಂಟಿಕೊಳ್ಳುತ್ತವೆ.

ಹೀಗಾಗಿ ಇಂದು ಯಾವ ಮಠಗಳೂ ಕೂಡ ತಿಳುವಳಿಕೆ ನೀಡುವ ಕೇಂದ್ರಗಳಾಗಿಲ್ಲ. ಶ್ರೀ ಶ್ರೀ ಶ್ರೀ ರವಿಶಂಕರರ ಆಶ್ರಮದ ವಿಶ್ವಸ್ಥ ಅವರ ಅಣ್ಣನ ಮಗನೇ ಎಂದು ಕೇಳಿದಾಗ, "ಸತ್ಯಸಾಯಿಬಾಬಾ" ಅವರ ಅಣ್ಣನ ಮಗನೂ ಆ ಪುಟ್ಟಪರ್ತಿಯ ಆಶ್ರಮದ ವಿಶ್ವಸ್ಥ ಎಂದು ಕೇಳಿದಾಗ "ಇದೆಂತಹ ಸನ್ಯಾಸ, ಎಂತಹ ಮಠ" ಎಂದೆನಿಸುತ್ತದೆ.

ಹೀಗಾಗಿ ನಮ್ಮ ಭಾರತೀಯ ಸಂಸ್ಕೃತಿ, ಹಿಂದೆ ಎಂತಾದರೂ ಇರಲಿ, ಇಂದು ಈ ಆಶ್ರಮ ಮಠಗಳು ಆಸ್ತಿಗಳಾಗಿರುವುದಂತೂ ದಿಟ. ಸನ್ಯಾಸಿ, ಊರ ಹೊರಗೆ ಇರಬೇಕು. ಯಾವ ಊರ–ಹಳ್ಳಿಯ ಬಳಿ, 3 ದಿನಗಳ ಮೇಲೆ ಇರಬಾರದು, ತಿರುಗುತ್ತಲೇ ಇರಬೇಕು, ಎನ್ನುವುದು ಸನ್ಯಾಸ ಧರ್ಮ. ಇದಕ್ಕೆ ಎದಿರಾಗಿ ನಡೆಯುತ್ತಿರುವವರೆಲ್ಲಾ ಸನ್ಯಾಸಿಗಳಲ್ಲ, ಸಂಸಾರಿಗಳು.

ಮುಂಬಯಿಯಲ್ಲಿ ಕೂಡ ಇಂತಹ ಸಂಸಾರಸ್ಥರ ಮಠಗಳಿವೆ. ಅಲ್ಲಿ ಭಕ್ತಾದಿಗಳು ಕಿಕ್ಕಿರಿದು ನೆರೆದು ಪಾದಸೇವೆ ಮಾಡುತ್ತಾರೆ. ನಮ್ಮ ಮಂದಿಯಲ್ಲಿ ಪಾದಸೇವೆಯಿಂದ ವೈಕುಂಠ ಕೈಲಾಸಗಳು ತಮ್ಮ ಕೈಗೇ ಸಿಗುತ್ತವೆಂಬ ದಡ್ಡ ನಂಬಿಕೆಗಳು ಇರುವ ತನಕ, ಇಂತಹ ಮಠಗಳ ಬೇಳೆ ಬೇಯುತ್ತಲೆ ಇರುತ್ತವೆ.

ನಮ್ಮ ನಮ್ಮ ಕರ್ಮಗಳಿಂದ ನಮ್ಮ ನಮ್ಮ ಗತಿಗಳು ನಮಗೆ ಒದಗುತ್ತವೆ ಎಂದು ನಮ್ಮ ಧರ್ಮ ಸಾರುತ್ತಿರುವಾಗ, ಯಾರ ಕಾಲಿಗೆ ಬಿದ್ದರೂ ಕೂಡ, ನಮ್ಮ ಪಾಲಿಗೆ ಬಂದಿದ್ದನ್ನು ತಪ್ಪಿಸಲು ಆಗುವುದೇ ಇಲ್ಲ.

ಪ್ರವಾಸ ಕಥನ

ರಾಕೀ ಪರ್ವತಗಳ ನಡುವೆ ಕ್ಯಾಬರೆ (ಕೆನಡಾದ ಕೆಲವು ನೆನಪುಗಳು)

✍ ಉಮಾ ರಾವ್

ಪುಸ್ತಕದ ರಕ್ಷಣೆ

ನನಗೆ ಲಿನ್ ಬೊವೆನ್ ಅವರ ಪರಿಚಯವಾದದ್ದು ಒಂದು ಸೆಮಿನಾರಿನಲ್ಲಿ. ಸರಳ ವ್ಯಕ್ತಿತ್ವದ ಈಕೆ ಕೆನಡಾದ ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಇವರ 'ಬಾಸ್ ವಿಸಲ್' ಮತ್ತು 'ಥ್ರೀ ಡಾಲರ್ ಡ್ರೀಮ್ಸ್'ಗಳಿಗೆ ಪ್ರಶಸ್ತಿಗಳು ದೊರಕಿವೆ. ನಾವಿಬ್ಬರು ಕಾಫಿ ಕುಡಿಯಲು ಒಂದು ರೆಸ್ಟುರಾಗೆ ಹೋದೆವು. ಇವರು ಭಾರತದಲ್ಲಿ ಹೆಣ್ಣಿನ ಸ್ಥಾನಮಾನಗಳು, ಅವಳು ಎಷ್ಟು ಮುಂದುವರಿದಿದ್ದಾಳೆ ಎನ್ನುವುದರ ಬಗ್ಗೆ ತುಂಬಾ ಕುತೂಹಲ ತೋರಿಸಿದರು. ನಾನೂ ಅಲ್ಲಿಯವರ ಸಂಸ್ಕೃತಿ ಪರಿಚಯ ಮಾಡಿಕೊಳ್ಳುತ್ತಾ ಮಾತು ಎಲ್ಲೆಲ್ಲಿಗೋ ಹೋಯಿತು.

ನಾನು ತುಂಬಾ ದಿನದಿಂದ ನನ್ನನ್ನು ಕಾಡುತ್ತಿದ್ದ ಒಂದು ಪ್ರಶ್ನೆ ಕೇಳಿದೆ. 'ಇಲ್ಲೊಬ್ಬರೇ ರೆಸ್ಟೊರಾಗೆ ಹೋಗಿ ಬೇಕಾದಷ್ಟು ಹೊತ್ತು ಕೂತರೆ. . . ಈಸ್ ಇಟ್ ಓಕೆ?'

ಸ್ವಲ್ಪ ಹೊತ್ತು ಯೋಚಿಸಿ ಅವರೆಂದರು 'ಐ ಥಿಂಕ್ ಇಟ್ಸ್ ಆಲ್ ರೈಟ್. . .ಹಾಗೇನೂ ತೊಂದರೆ ಇಲ್ಲ. ಆದರೆ ನಾನು ಯಾವಾಗಲೂ ಒಂದು ಪುಸ್ತಕ ಕೈಯಲ್ಲಿ ಹಿಡಿದು ಹೋಗ್ತೀನಿ. ಆಗ ಯಾರೂ ಬಾದರ್ ಮಾಡುವುದಿಲ್ಲ".

'ಇಲ್ಲದಿದ್ದಲ್ಲಿ'

'ನೋಡಿ, ಗಂಡಸರು ಗಂಟೆಗಟ್ಟಳೆ ಕಾಫಿ ಕಪ್ ಹಿಡಿದು ಕೂತು, ಬಂದು ಹೋಗುವವರನ್ನು ನೋಡುತ್ತಿದ್ದರೂ ಯಾರೂ ಏನೂ ಮಿಸ್ಟೇಕ್ ಮಾಡಿಕೊಳ್ಳೊಲ್ಲ. ಆದರೆ . . . ನಮಗೂ. . . ಐ ಸಪೋಸ್ ಇಟ್ಸ್ ಓಕೆ, ಬಟ್, ಐ ಫೀಲ್ ಸೇಫರ್ ವಿಥ್ ಎ ಬುಕ್".

ಕತ್ತಲಲ್ಲಿ ಕಪ್ಪು ಹಾವು

ಅಂದು ಏಶಿಯನ್ ಸ್ಟಡೀಸ್ ಸೆಂಟರ್ ಮತ್ತು ವಿಮೆನ್ಸ್ ಸ್ಟಡೀಸ್ ಡಿಪಾರ್ಟ್ ಮೆಂಟಿನವರು ಸೇರಿ 'ಎಂಜೆಂಡರಿಂಗ್ ವಾಯ್ಸನ್ಸ್' (Engendering Voices) ಎಂಬ ಸೆಮಿನಾರ್ ಏರ್ಪಡಿಸಿದ್ದರು. ಕೆನಡಾದ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರು ಭಾಗವಹಿಸಿದ್ದರು. ತಮ್ಮ ಶೋಷಣೆಯ ಬಗ್ಗೆ ಮಾತಾಡಿದರು. ಮಧ್ಯಾಹ್ನದ ಸೆಶನ್ ಸೌತ್ ಏಶಿಯಾದಲ್ಲಿ (ಭಾರತ) ಬಾಲವೇಶ್ಯೆಯರು ಹೆಚ್ಚುತ್ತಿರುವ ಸಮಸ್ಯೆಯ ಬಗ್ಗೆ ಇತ್ತು. ಇದರಲ್ಲಿ ಮಾತಾಡಿದವಳು ಜ್ಯೋತಿ ಸಂಘೇರಾ ಎಂಬ ಯುವತಿ. ಇದೇ ಸಮಸ್ಯೆಯ ಮೇಲೆ ಅಮೇರಿಕಾದ ಒಂದು ಯೂನಿವರ್ಸಿಟಿ ಯಲ್ಲಿ ಪಿಎಚ್.ಡಿ ಮಾಡಿದವಳು. ಅವಳು ಫಿಲಿಫೀನ್ಸ್, ಥೈಲ್ಯಾಂಡ್, ಭಾರತ ಹಲವಾರು ದೇಶಗಳಲ್ಲಿ ವೇಶ್ಯೆಯರೊಡನೆ ಎಷ್ಟೋ ಕಾಲ ಕಳೆದು, ಅಧ್ಯಯನ ನಡೆಸಿದವಳು. ನೇಪಾಳದಿಂದ ಹುಡುಗಿಯರನ್ನು ಕಲ್ಕತ್ತಾ ಮುಂಬಯಿ, ದೆಹಲಿಗೆ ತರುವ ಬಗ್ಗೆ, 12-13 ವರ್ಷದ ಹುಡುಗಿಯರಿಗೆ ಹೆಚ್ಚುತ್ತಿರುವ 'ಡಿಮ್ಯಾಂಡ್' ಬಗ್ಗೆ, ನೇಪಾಳದ ಕಡು ಬಡತನದಿಂದ ಪಾರಾಗಲು ಎಷ್ಟೋ ಜನ ಈ ದಾರಿ ಹಿಡಿಯುವ ಬಗ್ಗೆ, ಒಬ್ಬ ಹೆಣ್ಣು ಈ ವೃತ್ತಿ ಮಾಡಿ ಮನೆಗೆ ಸಾಕಷ್ಟು ಹಣ ಕಳಿಸಿದಾಗ ಅವಳಿಗಿರುವ ಹೆಮ್ಮೆಯ ಬಗ್ಗೆ, ಚಿಕ್ಕ ಹುಡುಗಿಯರನ್ನು ಕರೆತಂದ ತಕ್ಷಣ ಅವರನ್ನು 'ಬ್ರೇಕ್ ಡೌನ್' ಮಾಡಲು ದಿನಗಟ್ಟಳೆ ಅನ್ನ ನೀರಿಲ್ಲದೆ ಕತ್ತಲೆ ಕೋಣೆಯಲ್ಲಿಬಂದ್ ಮಾಡಿ ಅದರೊಳಗೆ ಹಾವು ಎಸೆಯುವ ಬಗ್ಗೆ ಮಾತಾಡಿದಳು.

ಪ್ರಶ್ನೋತ್ತರ ಸಮಯದಲ್ಲಿ ಇದರ ಬಗ್ಗೆ ತುಂಬಾ ತಹತಹ ಶುರುವಾಯಿತು. ಎಲ್ಲರೂ ಇದನ್ನು ನಿಲ್ಲಿಸಲು ತೀವ್ರವಾದ 'ಆಕ್ಷನ್' ತೆಗೆದುಕೊಳ್ಳಬೇಕಾದ ಅವಶ್ಯಕತೆಯ ಬಗ್ಗೆ ಒತ್ತಾಯ ಮಾಡಿದರು. ಬಿಸಿ ಏರುತ್ತಾ ಹೋಯಿತು.

'ನೀವು ಭಾರತದಲ್ಲಿ ಇದನ್ನು ಪೂರ್ಣವಾಗಿ ನಿಲ್ಲಿಸಲು ಏನು ಮಾಡಿದ್ದೀರಾ?'

'ಪ್ರಯತ್ನ ಮಾಡ್ತಿದ್ದಾರೆ. . ಆದರೆ ಸುಲಭವಲ್ಲಾಂದ್ರೆ ಏನರ್ಥ?'

'ನಮ್ಮ ದೇಶಗಳಲ್ಲಿ ಮಕ್ಕಳಿಗೆ ಸ್ವಲ್ಪ ಹಿಂಸೆಯಾದರೂ, ನಾವೆಷ್ಟು ಕಾಳಜಿ ವಹಿಸುತ್ತೇವೆ, ನಮ್ಮಲ್ಲಿ ಚೈಲ್ಡ್ ಅಬ್ಯೂಸ್ ಕಾನೂನುಗಳು ಎಷ್ಟು ಸ್ಟ್ರಿಕ್ಟ್ ಆಗಿವೆ. . ."

'ನೀವೇಕೆ ಈ ಸಮಸ್ಯೆಯನ್ನು ಪ್ರಾಸ್ಟಿಟ್ಯೂಶನ್ ಗೆ ಬದಲು, ಚೈಲ್ಡ್ ಅಬ್ಯೂಸ್ ಎಂದು ಪರಿಗಣಿಸಿ ತಕ್ಷಣ ಏನಾದರೂ ಮಾಡಬಾರದೆ/'

ಜ್ಯೋತಿ ಎಲ್ಲರ ಪ್ರಶ್ನೆಗಳನ್ನು ನಿಧಾನವಾಗಿ ಕೇಳಿದಳು.

'ನೀವು ಹೇಳುವುದೆಲ್ಲಾ ಸರಿ. ಆದರೆ ಒಂದು ವಿಷಯ ಯೋಚನೆ ಮಾಡಿದ್ದೀರಾ? ಎಲ್ಲಿ ಬೇಡಿಕೆ ಇರುತ್ತದೆಯೋ ಅಲ್ಲಿ ಪೂರೈಕೆ ಇರುತ್ತದೆ. ಇದು ಸರಳ ಸಪ್ಲೈ ಎಂಡ್ ಡಿಮ್ಯಾಂಡ್ ಪ್ರಶ್ನೆ. ಈ ಸಮಸ್ಯೆ ತುಂಬಾ ಹೆಚ್ಚಾಗಿರುವ, ಫಿಲಿಫೀನ್ಸ್ ನಂಥ ರಾಷ್ಟ್ರಗಳಲ್ಲಿ, ಬಾಲವೇಶ್ಯೆಯರ ೭೦% ಅಷ್ಟು ಗಿರಾಕಿಗಳು ಪಶ್ಚಿಮ ರಾಷ್ಟ್ರಗಳಿಂದ ಬಂದವರು. ನೀವು ನಿಮ್ಮ ದೇಶದಲ್ಲಿ ಮಕ್ಕಳ ಬಗ್ಗೆ ಅಷ್ಟು ಕಾಳಜಿ ವಹಿಸುತೀರಿ. ಆದರೆ ನಿಮ್ಮ ಗಂಡಸರನ್ನು ಮೊದಲು ಬೇರೆ ದೇಶದ ಬಾಲವೇಶ್ಯೆಯರ ಹತ್ತಿರ ಹೋಗುವುದನ್ನು ತಡೆಯಬಾರದೇಕೆ? ಇಲ್ಲಿನ ಕಾನೂನು

ನಿರ್ಮಿಸುವ ಗಂಡಸರು, ಬೇರೆ ದೇಶದ ಮಕ್ಕಳ ಮೇಲೆ ಅತ್ಯಾಚಾರ ನಡೆಸುವುದು ಸರಿಯೇ?' ಏಷ್ಟೋ ಹೊತ್ತು ಗಾಢ ಮೌನ ಆವರಿಸಿತು.

ರಾಕಿ ಪರ್ವತಗಳ ನಡುವೆ ಕ್ಯಾಬರೆ

ಬ್ಯಾಂಫ್ ನ್ಯಾಶನಲ್ ಪಾರ್ಕ್ ರಾಕೀ ಪರ್ವತಗಳ ನಡುವೆ ಹರಡಿರುವ ಅದ್ಭುತ ಅಭಯಾರಣ್ಯ. ಜಗತ್ಪ್ರಸಿದ್ಧ ತಾಣ ಗೆಳತಿ, ನಾಟಕಕಾರ್ತಿ ಜೋನ್ ಸಲಹೆಯಂತೆ ಅಲ್ಲಿನ ಬ್ಯಾಂಫ್ ಸೆಂಟರ್ ಆಫ್ ಆರ್ಟ್ಸ್ ನಲ್ಲಿ ಉಳಿದುಕೊಳ್ಳಲು ಸ್ಥಳ ಬುಕ್ ಮಾಡಿಕೊಂಡಿದ್ದೆ. ನನ್ನ ಫ್ಯಾಕ್ಸ್ ತಲುಪಿದ ತಕ್ಷಣ ಅಲ್ಲಿನ ಜಾರ್ಜ್ ರಾಸ್ ಅವರಿಂದ ಮರಳಿ ಫ್ಯಾಕ್ಸ್ ಬಂತು.

'ನೀವು ಬರುವುದು ತುಂಬಾ ಸಂತೋಷ. ಈ ಸಮಯದಲ್ಲಿ 'ಯ್ಯಾಕ್ಷನ್ ಪೊಯಿಟ್ರಿ ಫೆಸ್ಟಿವಲ್' ಕೂಡ ನಡೆಯುತ್ತಿರುತ್ತದೆ. ನಾರ್ತ್ ಅಮೇರಿಕಾದ ಮೂಲೆ ಮೂಲೆಯಿಂದ ಬಂದ ಅನೇಕ ಕವಿಗಳು, ಕತೆಗಾರರು ಅದರಲ್ಲಿ ಭಾಗವಹಿಸುತ್ತಾರೆ. ನೀವು ಒಂದೆರಡು ಕವಿತೆ ಓದಿದರೆ ತುಂಬಾ ಸಂತೋಷ' ಬ್ಯಾಂಫ್ ನೋಡದ ಭಾರತಕ್ಕೆ ಮರಳಬಾರದೆಂದು ಮನಸ್ಸಿನಲ್ಲೇ ಶಪಥ ಮಾಡಿಕೊಂಡಿದ್ದ ನನಗೆ ತುಂಬಾ ಖುಶಿಯಾಯಿತು.

ವ್ಯಾಂಕೋವರ್ ನಿಂದ ಕ್ಯಾಲ್ ಗರಿಗೆ ವಿಮಾನದಲ್ಲಿ ಹೋಗಿ ಅಲ್ಲಿಂದ ಮೂರು ಗಂಟೆ ಬಸ್ ಪ್ರಯಾಣ. ವಿಮಾನ ನಿಲ್ದಾಣದಿಂದಲೇ ಅತ್ಯಾಧುನಿಕ ಹವಾನಿಯಂತ್ರಿತ ಬ್ರೂಸ್ಟರ್ ಬಸ್ಸುಗಳು ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತದೆ. ದಾರಿಯುದ್ದಕ್ಕೂ ಬದಲಾಗುತ್ತಲೇ ಹೋಗುವ ರಾಕಿ ಪರ್ವತಗಳ ಅದ್ಭುತ ಲ್ಯಾಂಡ್ ಸ್ಕೇಪ್ ಗಳು. ಇಳಿಯುತ್ತಿದ್ದಂತೆಯೇ ಸ್ವಲ್ಪವೇ ದೂರದಲ್ಲಿ ನಿಂತು ನಮ್ಮನ್ನು ದಿಟ್ಟಿಸಿ ನೋಡುತ್ತಿದ್ದ ಜಿಂಕೆಯಂಥ ಭಾರೀ ಪ್ರಾಣಿಯನ್ನು ಡ್ರೈವರ್ ತೋರಿಸಿದ ಎಚ್ಚರಿಸಿದ. 'ಇವುಗಳು ಎಲ್ಕ್ ಗಳು. ದೆ ಡೋಂಟ್ ಲೈಕ್ ಅಸ್ ಗೆಟಿಂಗ್ ಟೂ ಕ್ಲೋಸ್ ಟು ದೆಮ್. . . ದೆ ಆರ್ ಅಗ್ರೆಸಿವ್.. ಸ್ಪೆಷಲೀ ನೌ ದಟ್ ಮೋಸ್ಟ್ ಆಫ್ ದೆಮ್ ಆರ್ ಎಕ್ಸ್ ಪೆಕ್ಟಿಂಗ್. . ' ಅವುಗಳಿಗೆ ದೂರದಿಂದಲೇ ನಮಸ್ಕಾರ ಹೇಳಿ ಬ್ಯಾಂಫ್ ಸೆಂಟರ್ ಆಫ್ ಆರ್ಟ್ಸ್ ಕಟ್ಟಡದೊಳಗೆ ನಡೆದಂತೆ ಕಾದಿತ್ತು ವೆಲಕಮ್ ಪತ್ರ, ಯ್ಯಾಕ್ಷನ್ ಪೊಯೆಟ್ರಿ ಫೆಸ್ಟಿವಲ್ ನ ಕಾರ್ಯಕ್ರಮದ ವಿವರಗಳು, ಆಹ್ವಾನ.

ಬೆಳಗಾಗೆದ್ದು 'ಡಿಸ್ಕವರ್ ಬ್ಯಾಂಫ್' ಟೂರ್ ತೆಗೆದುಕೊಂಡು ಸುತ್ತಮುತ್ತ ನೋಡಿದ್ದಾಯಿತು. ಗೊಂಡೋಲಾದಿಂದ ಸಲ್ಫರ್ ಮೌಂಟನ್ ಏರಿ ಅಷ್ಟೆತ್ತರದಿಂದ ಹಿಮದಿಂದ ಮುಚ್ಚಿದ ರಾಕಿ ಶ್ರೇಣಿ, ಕಡುನೀಲಿ ವರ್ ಮಿಲಿಯನ್ ಸರೋವರ ಸುತ್ತಿ ಬಳಸಿ ಸಾಗಿದ್ದ ಬೋ ಫಾಲ್ಸ್ ನೋಡಿದ್ದಾಯಿತು. ಬ್ಯಾಂಫ್ ಒಂದು ಚಿಕ್ಕ ಊರು. ಒಂದು ಮಾರ್ಕೆಟ್ ಬೀದಿ. ಮ್ಯೂಸಿಯಮ್ ಗಳು, ಅಂಗಡಿಗಳ ತುಂಬಾ ನೇಟಿವ್ ಇಂಡಿಯನ್ನರು ಮಾಡಿದ ಕರಕೌಶಲ್ಯದ ವಸ್ತುಗಳು. ಸ್ಕೀ ಸಾಧನಗಳು. ಚಳಿ ಉಡುಪುಗಳು, ಮೇಪಲ್ ಸಿರಪ್ ಮತ್ತು ಅದರಿಂದ ಮಾಡಿದ ತರಹ ತರಹ ಮಿಠಾಯಿಗಳು, ಸ್ವಲ್ಪ ದೂರದಲ್ಲೇ ಬ್ಯಾಂಫ್ ನ್ಯಾಶನಲ್ ಪಾರ್ಕ್ ಸ್ಥಾಪಿಸಲು ಸ್ಫೂರ್ತಿ ನೀಡಿದ ಸಲ್ಫರ್ ಸ್ಪ್ರಿಂಗ್.

ಮರಳಿ ಬರುವ ಹೊತ್ತಿಗೆ ಕಾರ್ಯಕ್ರಮ ಶುರುವಾಗುವ ಹೊತ್ತು. ಟನಲ್ ಮೌಂಟನ್ ಬುಡದಲ್ಲಿದ್ದ ಕಟ್ಟಡದಲ್ಲಿ ಮೊದಲು 1 ಗಂಟೆ 'ಕ್ಯಾಬರೆ' ಕಾರ್ಯಕ್ರಮ. ಅದರಲ್ಲಿ ಯಾರೂ ಬೇಕಾದರೂ ಪಾಲ್ಗೊಳ್ಳಬಹುದು. ಅಂದರೆ ಕ್ಯಾಬರೆ ಮಾಡಬೇಕೆಂದಿಲ್ಲ! ಕವಿತೆ ಓದಬಹುದು, ಕತೆ ಹೇಳಬಹುದು, ಹಾಡಬಹುದು. . . ಯಾವ ಕಟ್ಟುಪಾಡುಗಳಿಲ್ಲದೆ!

70-80 ಜನ ಕವಿಗಳು, ಕತೆಗಾರರು, ನಾಟಕಕಾರರು ಸೇರಿದ್ದರು. ಸ್ಟೇಜಿನ ಮೇಲೆ ಮಿಣುಕುವ ಬಣ್ಣಬಣ್ಣದ ಸಣ್ಣ ದೀಪಗಳು. ಸಂಗೀತದ ವಾದ್ಯಗಳು. ಲೇಟೆಸ್ಟ್ ಸೌಂಡ್ ಸಿಸ್ಟೆಮ್. ಒಂದು ಮೂಲೆಯಲ್ಲಿ ಬಿಯರ್ ಸರಬರಾಜು. ಲೋಹದ ಕುರ್ಚಿಗಳಲ್ಲಿ ಗುಂಪು ಗುಂಪಾಗಿ ಕೂತು ಹರಟುತ್ತಿರುವ ಜನ. ನಾನಂದು 'ಅಮ್ಮನ ಸೀರೆ' ಕವಿತೆಯ ಇಂಗ್ಲೀಷ್ ಅನುವಾದ ಓದಿದಾಗ, ಕನ್ನಡದಲ್ಲೂ ಓದಲು ಪ್ರಚಂಡ ಬೇಡಿಕೆ!

ಅಂದಿನ ಮುಖ್ಯ 'ಪರ್ಫಾರ್ಮರ್' ಟೊರಾಂಟೋದಿಂದ ಬಂದಿದ್ದ ಲಿಲಿಯ್ಯಾನ್ ಎಲೆನ್ ಎಂಬ ಕಪ್ಪು ಕವಿ. ಚಿಕ್ಕ ಕೂದಲಿನ, ಹೆಚ್ಚೇನೂ ಎತ್ತರವಿಲ್ಲದ, ಮಧ್ಯವಯಸ್ಸಿನ ಲಿಲಿಯ್ಯಾನ್ ಪ್ರಖ್ಯಾತ ಲೇಖಕಿ. ಜೊತೆಗೆ ಅಲ್ಲಿನ 'ರೈಟರ್ಸ್ ಆಫ್ ಕಲರ್' ಸಂಸ್ಥೆಯಲ್ಲಿ ಅವಳದ್ದು ಸಕ್ರಿಯ ಪಾತ್ರ.

ಮೈಕು ಹಿಡಿದು ನಿಂತು, ಗಿಟಾರ್- ಡ್ರಂಗಳ ಹಿಮ್ಮೇಳದೊಂದಿಗೆ ಮೊದಲನೇ ಪದ್ಯ ಹೇಳಿದಾಗಲೇ ಎಲ್ಲರಿಗೂ ರೋಮಾಂಚನ, ಅವಳ ಅಂದಿನ ಕವಿತೆ ಕೆಲವು ದಿನಗಳ ಹಿಂದೆ ಟೊರಾಂಟೋದಲ್ಲಿನಡೆದ ಒಂದು ಘಟನೆಯ ಬಗ್ಗೆ. ಕಪ್ಪು ಯುವಕನೊಬ್ಬ ಸಣ್ಣ ಕಳವು ಮಾಡಿದ್ದ. ಕಳೆದುಕೊಂಡವರು ದೂರು ಕೊಟ್ಟರು. ಪೋಲೀಸರು ಅವನಿಗಾಗಿ ಹುಡುಕಲು ಶುರು ಮಾಡಿದರು. ಎಲ್ಲಾ ಕಪ್ಪು ಯುವಕರನ್ನು ಹಿಡಿದು ಪ್ರಶ್ನಿಸಿದರು. ಕಪ್ಪು ಜನರು ನಡೆಸುತ್ತಿದ್ದ ಕಾರುಗಳನ್ನು ನಿಲ್ಲಿಸಿ ಹುಡುಕಿದರು. ರ್ಯಾಪ್ ಸಂಗೀತ ಕೇಳಿ ಬರುತ್ತಿದ್ದ ಮನೆಯೊಳಗೆ ಅರ್ಧ ರಾತ್ರಿ ಬಾಗಿಲು ಬಡಿದು ನುಗ್ಗಿದರು. ಪಾರ್ಟಿ ಮಾಡುತ್ತಿದ್ದ ಕಪ್ಪು ಗುಂಪುಗಳನ್ನು ಪೋಲೀಸ್ ಸ್ಟೇಷನ್ನಿಗೆ ಎಳೆದೊಯ್ದರು. 'ಛೇಸ್ ಹಿಮ್, , ಕ್ಯಾಚ್ ಹಿಮ್, , , ಬೀಟ್ ಹಿಮ್, , , ಹಿ ಈಸ್ ಬ್ಲ್ಯಾಕ್, ಬ್ಲ್ಯಾಕ್, ಹಿ ಈಸ್ ಬ್ಲ್ಯಾಕ್, ಬ್ಲ್ಯಾಕ್, ಬ್ಲ್ಯಾಕ್. . .'

ಲಿಲಿಯ್ಯಾನ್ ಆವೇಶದಿಂದ ಹಾಡುತ್ತಲೇ ಇದ್ದಳು. ಜನ ಚಪ್ಪಾಳೆ ತಟ್ಟುತ್ತಿದ್ದರು. . . ಅಂದು ರಾತ್ರಿ 2 ಗಂಟೆಗೆ ರೂಮಿಗೆ ಹೋಗಿ ಮಲಗಿದ ಮೇಲೂ ನಿದ್ರೆ ದೂರ. ಲಿಲಿಯ್ಯಾನ್ ಕಂಠ ಕಿವಿ ಗುಂಯ್ಗುಡುತ್ತಲೇ ಇತ್ತು. 'ಹಿ ಈಸ್ ಬ್ಲ್ಯಾಕ್, ಬ್ಲ್ಯಾಕ್, ಬ್ಲ್ಯಾಕ್. . .'

ಯಾರಿವಳು ಬನಶಂಕರಿ?

- ವರದಿ ನೇಸರು

ಕನ್ನಡ ನಾಡಿನ ದೇವತೆ "ತಾಯಿ ಬನಶಂಕರಿ" ಎಂದು ತಲೆತಲಾಂತರದಿಂದ ನಾವೆಲ್ಲರೂ ತಿಳಿದಿದ್ದೇವೆ. ಆದರೆ ಈ ಬನಶಂಕರಿ ಯಾರು? ಎಂಬುದನ್ನು ಯಾರೂ ಎಣಿಸಿ ನೋಡುವುದಿಲ್ಲ. ಯಾರೋ ಒಂದು ಕಲ್ಲಿನಲ್ಲಿ ಕಡೆದ ಒಂದು ಮಾರುತಿಗೆ. ಸೀರೆ ಉಡಿಸಿ, ಕಿರೀಟ ತೊಡಿಸಿ, ಹೂವಿನ ಅಲಂಕಾರ ಮಾಡಿದ್ದು ನಮಗೆ ಕಾಣುತ್ತದೆ. ಆದರೆ ಅವಳೇನೇ ಬನಶಂಕರಿ?

ಇದೆಲ್ಲವನ್ನೂ ನಾವು ನೋಡುವಾಗ, ಮಹಾಭಾರತ, ರಾಮಾಯಣವನ್ನು ತಿಳಿಯಬೇಕು ಮಹಾಭಾರತದ ಹೊತ್ತಿನಲ್ಲಿ ಭಾರತದ ಸರಸ್ವತಿ-ಯಮುನಾ-ಗಂಗಾ ನದಿಯ ನಡುವೆ ಹಾಗೂ ಸುತ್ತಮುತ್ತ ಇದ್ದ ರಾಜ್ಯಗಳ ಹೆಸರಿವೆ. ಬೇರೆ ಬೇರೆ ದೇಶಗಳಿಂದ, ರಾಜರು ಕೌರವರ ಕಡೆ, ಪಾಂಡವರ ಕಡೆ, ತಮ್ಮ ಪಡೆಗಳನ್ನು ಕಳಿಸಿದ್ದುದು ಹಾಗೆಯೇ ಹದಿನೆಂಟು ದಿನ ನಡೆದ ಈ ಕಾಳಗದಲ್ಲಿ ಯಾವ ಯಾವ ರಾಜರು ಮಡಿದರು, ಎಂಬುದನ್ನು ಅಚ್ಚು ಮಾಡಿದ್ದಾರೆ.

ರಾಮಾಯಣ ಕಾಲದಲ್ಲಿ ವಿಂಧ್ಯದ ತೆಂಕಣದಲ್ಲಿ ಕಾಡುಗಳೇ ಇದ್ದುದು ತಿಳಿಯುತ್ತದೆ. ಈ 'ದಂಡಕಾರಣ್ಯ', 'ಚಿತ್ರಕೂಟ', 'ಋಷ್ಯಮೂಕ', 'ಕಿಷ್ಕಿಂದಾ' ಎಲ್ಲೆಡೆಯೂ ದಟ್ಟವಾದ ಕಾಡುಗಳಿದ್ದು, ಅಲ್ಲಿ ಕಾಡಿನ ಜನರೇ ಇದ್ದುದು ನಮಗೆ ತಿಳಿಯುತ್ತದೆ. "ವಾನರ" ಎನ್ನುವುದು "ವನನರ" ಎನ್ನುವುದರ ಕಿರಿದಾದ ಪದ. ಅವರೇನೂ ಮಂಗಗಳಾಗಿರಲಿಲ್ಲ. ಕಾಡಿನಲ್ಲಿಯೇ ವಾಸಿಸುತ್ತಿದ್ದ ಈ ಮಂದಿ ತಮ್ಮದೇ ಆದ ರಾಜ್ಯಗಳನ್ನು ಆಳುತ್ತಿದ್ದರು. ಆದರೆ ಎಲ್ಲಿಯೂ ಯಾವ ಪಟ್ಟಣಗಳ ಹೆಸರು ಅವುಗಳು ಹೇಗಿದ್ದವು? ಎನ್ನುವುದರ ಬಗ್ಗೆ ಏನೂ ಕಾಣುವುದಿಲ್ಲ.

ಆದ್ದರಿಂದ ಆ ಹೊತ್ತಿನಲ್ಲಿ ವಿಂಧ್ಯದ ತೆಂಕು ದಿಟ್ಟಿನಲ್ಲಿ ಬರಿಯ ದಟ್ಟವಾದ ಕಾಡುಗಳಿದ್ದು, ಹಲವಾರು ಜೀವ ಜಂತುಗಳು ಮನೆ ಮಾಡಿಕೊಂಡಿದ್ದಾರೆ. ತಾಯಿ ಪಾರ್ವತಿ ಹಲವಾರು ತೆರದಲ್ಲಿ ನಮಗೆ ತೋರಿಕೊಳ್ಳುತ್ತಾಳೆ. ನಮ್ಮ ನಾಡಿನ ಹಬ್ಬ, 'ನವರಾತ್ರಿ' ಈ ಒಂಬತ್ತು ದಿನಗಳಲ್ಲಿ ತಾಯಿ ಒಂಬತ್ತು ಬಗೆಯಾಗಿ ನಮಗೆ ಕಾಣಿಸಿಕೊಳ್ಳುತ್ತಾಳೆ. ಬೇಸಿಗೆಯಲ್ಲಿ ನೆಲವೆಲ್ಲಾ ಒಣಗಿ ಬರಡಾಗಿ ಬಿಡುತ್ತದೆ. ಆದರೆ ಶ್ರಾವಣ ಮಾಸದಲ್ಲಿ ಮಳೆ ಹೊಯ್ಯಲು ಮೊದಲಾಗಿ, ಹಸಿರು ಕೊನೆಗಳು ಒಡೆಯಲು ಅಣಿಯಾಗುತ್ತವೆ. ಮುಂದೆ ಭಾದ್ರಪದದಲ್ಲಿ ಚೆನ್ನಾಗಿ ಮಳೆಯಾದ ಮೇಲೆ ಎಲ್ಲಾ ಗಿಡ ಮರಗಳೂ ಹುಲುಸಾಗಿ ಬೆಳೆದು, ನೆಲವೆಲ್ಲಾ ಹಸಿರಾಗುತ್ತದೆ. ಮಳೆ ನಿಂತಾಗ, ಗಾಳಿಯಲ್ಲಿ ನೀರಿನ ಹಬೆ ಇನ್ನೂ ಇರುವುದರಿಂದ, ನೇಸರಿನ ಬೆಳಕು ಮೂಡಿದಾಗ, ಆ ಬೆಳಕು ಹಬೆಯಲ್ಲಿ ಒಡೆದು ಮೂಡಿದಾಗ, ಆ ಬೆಳಕು ಹಬೆಯಲ್ಲಿ ಒಡೆದು 'ಕಾಮನ ಬಿಲ್ಲಾಗಿ' ಬಾನಿನಲ್ಲಿ ತೋರುತ್ತದೆ. ಇಲ್ಲಿ ಬೆಳಕು, ಒಂಬತ್ತು ಬಗೆಯಾಗಿ ತೋರುವುದರಿಂದ ತಾಯಿಯೂ ಕೂಡ.

ರಕ್ತವರ್ಣೆ, ಮರಕತವಲ್ಲಿ, ನೀಲಾಂಬಿಕೆ, ಗೌರಿ, ಕಾಳಿ, ಶಾರದಾ, ದುರ್ಗಿ ಯಾಗಿ ಕಾಣುವ ಈ ತಾಯಿ ಶಾರದಾ ಅಂದರೆ 'ತಿಳಿವಾಗಿ' ನಮಗೆ ತೋರಿಬರುತ್ತಾಳೆ. ಈ ಶಾರದೆಯೇ ಶಾಕಂಬರಿ, ಅಂದರೆ ಗಿಡ-ಮರಗಳ ದೇವತೆಯಾಗಿ, ಅವಳೇ, ಬನಶಂಕರಿಯಾಗಿ ಬರುತ್ತಾಳೆ. ಈ ಬನಶಂಕರಿ ಎಲ್ಲಾ ಜೀವ ಜಂತುಗಳನ್ನು ಏರಿ, ಕಾಡಿನಲ್ಲಿ ಎಲ್ಲಾ ಮಂದಿಯನ್ನೂ ಸಾಕುತ್ತಾ ತಿರುಗುತ್ತಿರುತ್ತಾಳೆ. ಈ ಬನಶಂಕರಿ, ಕೈಯಲ್ಲಿ ಸಿಹಿಯಾದ ಕಬ್ಬನ್ನು ಹಿಡಿದು, ಆನೆಗಳನ್ನು ತನ್ನೆಡೆಗೆ ಕರೆಯುತ್ತಾಳೆ. ಸಿಂಹವನ್ನು ಏರಿರುವ ಈ ತಾಯಿ ಕರುಣಾಳು ತನ್ನೆಲ್ಲಾ ಮಕ್ಕಳನ್ನು ಮರುಕದಿಂದ ಸಾಕುತ್ತಾಳೆ.

ನಾವು ಭಾರತದ ಪಟ ನೋಡಿದಾಗ ನಮಗೆ ಕಾಣುವುದು, ಕಡಲ ತೀರದಿಂದ ತುಸು ದೂರದಲ್ಲಿ ಬೆಟ್ಟಗಳ ಸಾಲು ಕಾಣುತ್ತದೆ. ಇದು ಪಡುವಣ ಹಾಗೂ ಮೂಡಣ ನಿಟ್ಟಿನಲ್ಲಿಯೂ ಕಾಣುತ್ತದೆ. ಈ ಮೂಡಣ-ಪಡುವಣ ಬೆಟ್ಟ ಸಾಲುಗಳು ನೀಲಗಿರಿಯಲ್ಲಿ, ದೊಡ್ಡಬೆಟ್ಟದಲ್ಲಿ ಸೇರುತ್ತವೆ. ಈ ಎರಡೂ ಬೆಟ್ಟ ಸಾಲುಗಳ ಮೇಲೆ ಇರುವ ನಾಡೇ ಕರುನಾಡು. ಈ ಎತ್ತರದ ನೆಲದಲ್ಲಿ ಹಸಿರಾಗಿರುವ ನಾಡೇ ಕರುನಾಡು. ಕಾಡಿದ್ದರೇ ಜೀವ ಜಂತುಗಳು ನಲಿಯುತ್ತವೆ. ಈಗಲೂ ಕೂಡ, ಕರುನಾಡಿನಲ್ಲಿಯೇ ನಮಗೆ ಆನೆ, ಹುಲಿ, ಚಿರತೆ, ಕಾಡು ಕಿರುಬ್, ಕರಡಿಗಳು ಸಿಗುವುದು. ಇವುಗಳು ಕೀಳು ನಾದಡಿನಲ್ಲಿ ಕಾಣುವುದಿಲ್ಲ. ಹೀಗಾಗಿ ಕರುನಾಡೇ ಕಾಡಿನ ನಾಡಾಗಿದೆ.

ಈ ತಾಯಿಯ ಮೊದಲ ಗುಡಿ ಬನವಾಸಿಯಲ್ಲಿ ಕಾಣುತ್ತದೆ. ಬನವಸೆ ನಮ್ಮ ನಾಡಿನಲ್ಲಿ ಹಲವಾರು ತೆರದಲ್ಲಿ ಹೆಸರಾಗಿದೆ. ಈ ಬನವಸೆಯೇ ಕದಂಬರ ರಾಜಧಾನಿಯಾಗಿತ್ತು. ಈ ಬನವಸೆಯೇ ಅಕ್ಕ ಮಹಾದೇವಿಯ ತವರಾಗಿತ್ತು. ಬನವಸೆಯೇ ಈಗಿನ ಸಿರ್ಸಿಯಲ್ಲಿದೆ. ಇಲ್ಲಿಯೇ ಮಧುಕೇಶ್ವರ ಗುಡಿಯೂ ಇದೆ. ಈಗಲೂ ಕೂಡ ಇದು ತಿಲಕಾರಣ್ಯ ಕಾಡಿನಲ್ಲಿ ಇದೆ. ಈ ಗುಡಿ ಮೊದಲು ಬಾದಾಮಿ ಚಾಲುಕ್ಯ ರಿಂದ ಕಟ್ಟಲಾಗಿತ್ತು. ಏಕೆಂದರೆ ಕರುನಾಡಿನಲ್ಲಿಯೇ ಮೊಟ್ಟಮೊದಲಿಗೆ ದೇವಾಲಯಗಳನ್ನು ಕಟ್ಟುವ ವಾಡಿಕೆಯಾಗಿದ್ದುದು ಪಟ್ಟದಕಲ್ಲು, ಐಹೊಳೆ ಗುಡಿಗಳನ್ನು ಕಟ್ಟಿದ ಹೊತ್ತಿನಲ್ಲಿಯೇ ಈ ಬನಶಂಕರಿಯ ಗುಡಿಯೂ ಕಟ್ಟಲ್ಪಟ್ಟಿದ್ದುದು. ಚಾಲುಕ್ಯರು ತಮ್ಮ ಮನೆಯ ದೇವರಾಗಿ ಬನಶಂಕರಿಯನ್ನು ಅಪ್ಪಿಕೊಂಡರು. ಸಿಂಹವೇರಿದ ಈ ತಾಯಿ ಚಾಲುಕ್ಯರನ್ನು ಬಡಗು ಹಾಗೂ ತೆಂಕಣ ನಿಟ್ಟಿನಲ್ಲಿ ಜಯಭೇರಿ ಹೊಡೆಸಿ ಮುನ್ನುಗಿಸಿದಳು. ಇಂತಹ ತಾಯಿಯ ಗುಡಿಗಳು ಕರುನಾಡಿನಲ್ಲಿ ಇನ್ನೂ ಹಲವಾರು ಎಡೆಗಳಲ್ಲಿ ಮೂಡಿಬಂದವು. ಶೃಂಗೇರಿಯ ಶಾರದಾ, ಕೊಲ್ಲೂರಿನ ಮೂಕಾಂಬಿಕಾ, ಹೊರನಾಡಿನ ಅನ್ನಪೂರ್ಣ, ಮೈಸೂರಿನ ಚಾಮುಂಡಾ, ಹಾಸನದ ಹಾಸನಾಂಬಾ, ಕೋಲಾರದ ಕೋಲಾರಮ್ಮ ಎಲ್ಲವೂ ಈ ತಾಯಿಯ ರೂಪಗಳೇ.

ನವರಾತ್ರಿ ಕನ್ನಡನಾಡಿನ ವಿಶೇಷ ಹಬ್ಬ ಇದು ಚಾಲುಕ್ಯರ ರಾಜ್ಯದಲ್ಲಿದ ಗುಜರಾತ್, ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ವಿಜೃಂಭಣೆಯಿಂದ ಇಂದಿಗೂ ಆಚರಿಸಲ್ಪಡುತ್ತದೆ. ಅದೇ ತಮಿಳುನಾಡು ಹಾಗೂ ಕೇರಳದಲ್ಲಿ ಇದೇನೂ ವಿಶೇಷ ಹಬ್ಬವಲ್ಲ.

ಇಂದು Enviornment Protection ಎಂಬ ಕೂಗು ಹಾಕುತ್ತಿರುವವರೆಲ್ಲಾ 'ಬನಶಂಕರಿಗೆ ಜಯ' 'ಬನಶಂಕರಿಗೆ ಜಯ' ಎಂದು ಕೂಗಬೇಕು 'ಹಸಿರೇ ನಮ್ಮ ಉಸಿರು' ಎಂಬುದು ಕನ್ನಡ ನಾಡಿನಲ್ಲಿ ಹುಟ್ಟಿದ ಕೂಗು.

ಇಂದು flat ಗಳನ್ನು ಕಟ್ಟುವುದಕ್ಕಾಗಿ ಅಂದಿನ ಕೆರೆಗಳನ್ನೆಲ್ಲಾ ಇಂಗಿಸುತ್ತಿರುವ ರಾಜಕಾರಣಿಗಳು ಈ ತಾಯಿಯನ್ನು ಪೂಜೆ ಮಾಡುವ ಮೊದಲು ಅವಳು ಕಲಿಸಿದ ಪಾಠವನ್ನು ಮರೆಯಬಾರದು .

Om

Srimad Bhagavad Gita

An English Translation

✍ M.A.N.Prasad

Chapter 4

Gnyāna Karma Sanyāsa Yoga

Lord Sri Krishna said: At the beginning of this '*Kalpa*' I taught this eternal *yoga* to Surya, and he in turn
Taught it to his son Manu, and Manu in turn taught it to king *Ikshvāku* - 1

The saintly kings had learnt this *yoga* which had come to them through generations.
But, O' Arjuna, for a long time on this earth, this yoga appears to have been lost. - 2

Since you are my devotee and a dear friend of mine, I am explaining you this ancient *yoga*,
Which is not only very good but, is also a great secret, full of inner meaning. - 3

Arjuna said: You were born recently, whereas Surya was born ages ago, at the beginning of this '*kalpa'.*
How am I therefore to understand that this *yoga* was explained by you to him? - 4

Lord Sri Krishna said: O' Arjuna, many lives of both you and me have been completed. But Arjuna,
You are not aware of all of them where as I am aware of them all. - 5

Though I am indestructible, birth less and am the master of all living beings,
I control my nature and through my '*Yogamāya*' incarnate myself. - 6

Whenever '*Dharma'* is destroyed or disrupted and '*Adharma*' becomes prominent,
I then incarnate myself on this earth and become visible to all - 7

To protect and uplift the good, and destroy the evil doers,
To re-establish Dharma, I shall take incarnations in each *Yuga* - 8

O' Arjuna, one who understands that this birth of mine and all my activities are for a
Divine purpose, will attain me after shedding his mortal body and not be born again - 9

Having overcome desire, fear and anger, many men have surrendered to me totally,
And have attained me, by steady devotion free from any expectations
And purification through the penance of knowledge. - 1 0

O' Arjuna, I respond to each according to how they worship me. Knowing this,
The intelligent men conduct themselves accordingly and follow my path. - 11

In this world, men worship god desiring for fruits or rewards for their labour. But then,
Their labour may produce fruits quickly, but they will not be able to realize me. - 12

Based on their characters and nature of work, I have made divisions of
Brahmana, Vaisya, Kshatriya and Shudra. Though I am the creator of this,
Being indestructible, you could consider me to be in reality not so. - 13

I am not desirous of the fruits of labour, hence my actions do not afflict me. Those who
Understand this truly will also be free from bondage and will not be afflicted by their actions - 14

Understanding this concept, the early aspirants for liberation acted accordingly.
Hence, you too follow the path adopted by your ancestors and carry out your actions - 15

Which action is prescribed and which action is not, has baffled even the great intellects.
I shall therefore explain you the principle of action, knowing which you can
Liberate yourself from the inauspicious, that is the bondage resulting from action - 16

One should know about actions that are considered as '*Karma*',
As also the actions considered '*Akarma*', one should also know
Which actions are prohibited – known as '*Vikarma*',
Because, the pace of *karma* is very fast. - 17

All actions performed by one without any ego, with a sense of detachment
As though one were not its doer, and one who sees detachment or sacrifice
In the inactions of the ignorant or the action of others, is a wise one
Among men and a yogi, who performs all *karmas*. - 18

One whose actions bear the approval of the *shāstras*,
Which are free from desires, aspirations and intents,
Whose actions have been incinerated by the fire of knowledge,
Such a person is acknowledged as a *Pandita* by even the learned ones - 19

One who is free from this worldly bondage, immersed always in the Almighty,
Ever satisfied and happy, free from the desire of fruits of his action,
Though he is actively involved in action, he is truly not doing any '*karma*'. - 20

One who has conquered his mind, body and senses,
Who has renounced all things of pleasure and enjoyment,
Though he is doing actions to keep the body and soul together,
Is free from the flaws of committing any sin. - 21

One who is satisfied with whatever naturally comes to him,
Who is beyond the effects of happiness or sorrow,
Who is free from envy and looks at success and failure alike,
Such a '*Karmayogi*' will not be bound by *karma*, though he performs them. - 22

One who is unattached, one who has shed his ego,
One who is constantly thinking of God,
One who is devoted to performing '*Yagnyas*',
The *karmas* of such a person do not produce bondage. - 23

When the appliances used in a *Yagnya* are '*Bramha*', the offering is '*Bramha*',
The sacrificial fire is '*Bramha*', the offerer is '*Bramha*', and to whom it is offered is '*Bramha*',
The apt reward for such action by one who is in a "*Samadhi*" is also '*Bramha*'. - 24

Some *yogis* conduct *Yagnya* to propitiate different divinities very well,
Some enlightened ones offer as sacrifice their *Yagnya* in the sacrificial fire of '*Parabramha*'. - 25

Some *yogis* offer their sense of hearing in the sacrificial fire of self-control and
Gain mastery over them, some others offer their words in the sacrificial fire of senses
And destroy them even though they are detached. – 26

Other yogis offer all the acts of senses and 'prāna' in the fire of self-control,
Which is rendered shining and lustrous by the knowledge. - 27

Many others, with the welfare of mankind in view,
Sacrifice material objects as an offering to the God,
Similarly, others offer '*Tapas*' to uphold their '*dharma*',

Some others offer '*Ashtāngayoga*' as *Yagnya*,
Yet others follow non-violent and rigorous penances
Reciting God's name and studying *shastras*. - 28

Other *yogis* offer '*prāna vāyu*' in '*apāna vāyu*' and similarly some offer '*apāna vāyu*' in '*prāna vāyu'*,
Yogis who are exponents of '*prānāyāma*' offer by stopping both '*prāna*' and '*apāna*',
Yet others who live on limited food offer '*prāna*' as sacrifice to '*prāna*', and all these
Whose sins have been absolved through *yagnyas* are well versed in *yagnyas*. - 29 & 30

O' *Great Kuru Arjuna*, *yogis* enjoying the nectar of knowledge
Which is the fruit of *yagnya*, attain *Parabramha,*
For those who do not perform *yagnyas*, even this world
Provides no happiness, what to speak of the other world? – 31

Thus, different types of *yagnyas* have been outlined in Vedas and know that
All of them were created through the acts of mind, body and senses.
Knowing this truly, and observing detachment, you will be able
To liberate yourself from the worldly bondage. - 32

O' Arjuna, *yagnya* of knowledge is superior to other *yagnyas*
Which give you material gains, because, all acts ultimately end in
Knowledge or attainment of knowledge is the aim of all acts. - 33

Prostrate sincerely, serve well, ask questions to clear your doubts and
Acquire that knowledge well. Learned ones who know the hidden
Inner meanings will preach you about that knowledge. - 34

O' Arjuna, knowing that knowledge you shall not be subjected to
Illusion, and through it you shall realize the Lord who is the infinite soul,
Immanent in all beings and feel the immense bliss. - 35

Though you might have committed the most sins, if you rely on the sail boat of knowledge
You shall undoubtedly overcome all the sins and sail across the ocean of sins - 36

Just as a glowing fire consumes the fire wood and reduces it into ashes,
The fire of knowledge shall burn away all *karmas* and reduces them into ashes - 37

In this universe, undoubtedly there is nothing as sacred as knowledge.
One who consistently strives to purify his heart and develop equanimity,
Will begin to experience it over a period of time. - 38

One who has conquered his senses, regularly practices meditation and has a deep sense of devotion
Will acquire knowledge. Then he shall realize God and shall attain great peace. - 39

The ignorant, who lacks devotion, does not know about God and is doubtful of everything by nature
Will be spiritually destroyed. He shall be neither happy here nor happy in the other world - 40

O' *Dhananjaya*, one who looks at all actions with equanimity and treats them
As an offering to the Lord, Whose doubts have been destroyed fully by knowledge,
Karma or actions cannot bind such a '*Jitendriya*' who has conquered his senses - 41

Therefore O' Arjuna, concentrate on equanimity; destroy the
Doubts created by ignorance and deeply seated in your mind with
The sword called knowledge and get ready for the battle. - 42

😁ನಗೆಹನಿ😁

ಇಬ್ಬರು ಸಂತಾಜಿಗಳು ಸೇರಿಕೊಂಡು ಒಂದು ಕಾರ್ ನಲ್ಲಿ ಬಾಂಬ್ ಫ್ಲಾಂಟ್ ಮಾಡುತಿದ್ದರು
ಒಬ್ಬ ಕೇಳಿದ : ಅಲ್ಲ ಕಣಯ್ಯಾ ಅಕಸ್ಮಾತ್ ಬಾಂಬ್ ಡುಂ ಎಂದುಬಿಟ್ಟರೆ ಏನ್ ಗತಿ ?
ಇನ್ನೊಬ್ಬ : ಯೋಚನೆ ಮಾಡಬೇಡ ಗುರು, ನನ್ನ ಹತ್ರ ಇನ್ನೊಂದು ಬಾಂಬ್ ಇದೆ.
****

ಆಫೀಸರ್- ರಜೆ ಕೊಡೊಕೆ ಸಾಧ್ಯವಿಲ್ಲರಿ.
ಸಂತಾ - ಸಾರ್, ನನ್ನ ಮದುವೆ ಸಾರ್, ರಜ ಕೊಡದೆ ಇದ್ದರೆ ಹೇಗೆ ಸಾರ್?
ಆಫೀಸರ್- ಮದುವೇನಾ? ನಿನ್ನನ್ನು ಮದುವೆ ಆಗೋಕೆ ಮುಂದೆ ಬಂದಿರೊ ಮೂರ್ಖಳು ಯಾರಯ್ಯ?
ಸಂತಾ - ನಿಮ್ಮ ಮಗಳೆ ಸಾರ್.
****

TV ವರದಿಗಾರನೊಬ್ಬ ರೈತನ Live ಸಂದರ್ಶನ ಮಾಡುತ್ತಿದ್ದ.

ವರದಿಗಾರ: ನೀವು ಕುರಿಗೆ ಏನು ತಿನ್ನಿಸ್ತೀರಿ?

ರೈತ: ಬಿಳಿಕುರಿಗೋ? ಕರಿ ಕುರಿಗೋ?

ವರದಿಗಾರ: ಬಿಳಿ.

ರೈತ: ಹುಲ್ಲು....

ವರದಿಗಾರ: ಮತ್ತೆ ಕರೇದಕ್ಕೆ?

ರೈತ: ಅದಕ್ಕೂ ಹುಲ್ಲು...

ವರದಿಗಾರ: ನೀವು ಈ ಕುರಿಗಳನ್ನಾ ಯೆಲ್ಲಿ ಕಟ್ತೀರಿ?

ರೈತ: ಕರೇದನ್ನೋ? ಬಿಳೇದನ್ನೋ?

ವರದಿಗಾರ: ಬಿಳೇದು...

ರೈತ: ಹೊರಗಿನ ಕೋಣೆಯಲ್ಲಿ..

ವರದಿಗಾರ: ಕರೇದನ್ನಾ..?

ರೈತ: ಅದನ್ನೂ ಹೊರಗಿನ ಕೋಣೆಯಲ್ಲಿಯೇ...

ವರದಿಗಾರ: ಮತ್ತೆ ಅವುಗಳಿಗೆ ಸ್ನಾನಾ ಮಾಡ್ಸೋದು ಹೇಗೆ?

ರೈತ: ಕರೇದಕ್ಕೋ? ಬಿಳೇದಕ್ಕೋ...?

ವರದಿಗಾರ: ಬಿಳೇದಕ್ಕೆ...

ರೈತ: ನೀರಿನಿಂದ...

ವರದಿಗಾರ: ಕರೇದಕ್ಕೆ...?

ರೈತ: ಅದಕ್ಕೂ ನೀರಿಂದಲೇ...

ವರದಿಗಾರನಿಗೆ ಕೋಪ ನೆತ್ತಿಗೇರಿತು, ಕಿರುಚವಂತೇ ಹೇಳಿದ: ಮೂರ್ಖ! ಎರಡಕ್ಕೂ ಒಂದೇರೀತಿ ಮಾಡೋದು ಅಂದ್ಮೇಲೆ ಪದೇ ಪದೇ ಕರೇದೊ ಬಿಳೇದೋ ಅಂತಾ ಯಾಕಯ್ಯಾ ಕೇಳ್ತಿದ್ದೆ?

ರೈತ: ಯಾಕಂದ್ರೆ... ಕಪ್ಪು ಕುರಿ ನಂದು....

ವರದಿಗಾರ: ಮತ್ತೆ ಬಿಳೇದು...?

ರೈತ: ಅದೂ...ನಂದೇ!...

ವರದಿಗಾರ ಮೂರ್ಛೆಹೋದ!! ಪ್ರಜ್ಞೆ ಬಂದಮೇಲೆ ರೈತ ಹೇಳಿದ, ಈಗ ಗೊತ್ತಾಯ್ತಾ? TVಲಿ ನೀವು ಅದೇ ಅದೇ ಸಮಾಚಾರಾನಾ ಮತ್ತೆ ಮತ್ತೆ ತಿರ್ಗಾ ಮುರ್ಗಾ ತೋರ್ಸಿ ತೋರ್ಸಿ ನಮ್ತಲೇ ತಿಂತೀರಲ್ಲಾ ಆವಾಗಾ ನಮ್ಗೂ ಹೀಗೇ ಬೇಜಾರಾಗತ್ತೆ...!

"ಶ್ರೀರಾಮ ಇಂಡೋನೇಶಿಯಾ"ದಲ್ಲಿ

✍ ವನಜಾ ರಾಜನ್

"ಶ್ರೀರಾಮ ಇಂಡೋನೇಶಿಯಾ"ದಲ್ಲಿ ಸರಿಸುಮಾರು, 18ನೆಯ ಶತಮಾನದಲ್ಲಿ "ರಾಮಾಯಣ" ವನ್ನು ಪುನಃ ಕಥಿಸಲಾಯಿತು. ಮುಸ್ಲೀಮ್ ದೊರೆ ಪಕುಬುವೋನೋ (III) ಸುರಾಕಾರ್ತರವರು, ಕವಿ 'ಯಸಾದಿಪುರ ರಾಡೆನ್" ರವರಿಂದ, ಪ್ರಾಯಶಃ ಬರೆಸಿರಬಹುದೆನ್ನಲಾಗಿದೆ. ಈ ಹಿಂದೆ, ಇದೇ ಕವಿ, ಜಾವದ ಯುವರಾಜನಿಗಾಗಿ ರಾವಣ ಹಾಗೂ ಸಹಸ್ರ ಬಾಹು ಅರ್ಜುನನ (Rawana and the 1,000 armed Arjuna) ನಡುವೆ, ನಡೆಯಲಾಯಿತು ಎನ್ನುವ ಕಾದಾಟ, ಘರ್ಷಣೆಯ ಬಗ್ಗೆ ಬರೆದಿದ್ದರು. ಅದೇ ರೀತಿ Prophet Muhammed ರವರ ಜೀವನದ ಕಥಾನಕಗಳನ್ನು "Seerat Un Nabi" ಎಂಬುದಾಗಿ ಹೆಸರಿಸುತ್ತಾರೆ. ಸ್ವತಃ ಯಸಾದಿಪುರ (I) ಓರ್ವ ಮುಸ್ಲಿಂ ಆಗಿದ್ದರಾದ್ದರಿಂದ ಈ ಮೇಲಿನ 'ತಲೆಬರಹ' ಸಹಜವಾಗಿ ಅವರು ನೀಡಿದರು ತಮ್ಮ ಕಥೆಗಳಿಗೆ.

ಗೋಸ್ವಾಮಿ ತುಳಸೀದಾಸರನ್ನು "ಆದಿಕವಿ" ವಾಲ್ಮೀಕಿಯವರ ಅವತಾರವೆಂದೇ ಬಹಳ ಮಂದಿ ಭಾವಿಸುತ್ತಾರೆ. ವಾಲ್ಮೀಕಿ ಕವಿ ಸಂತನಾಗುವ ಮೊದಲು ಪ್ರವಾಸಿಗರನ್ನು ಲೂಟಿ ಮಾಡುತ್ತಿದ್ದನೆಂದು, ಮುಸ್ಲಿಂ ಜಾನಪದ ಪರಂಪರೆಯ ಅನುಮೋದನೆ ಸಹ ಎಂಬ ಕಾರಣವನ್ನು ನೀಡಿ, ಮೊಟ್ಟಮೊದಲನೆಯ ಶ್ರೀಮದ್ರಾಮಾಯಣದ ಕರ್ತೃ ಗೋಸ್ವಾಮಿಯೇ ಎಂಬುದಾಗಿ, 'ಸುನನ್ ಕಾಳಿಜಗ' ಸಹ (ಇಂಡೋನೇಶಿಯದ ಪ್ರಭಾವಿ ಸೂಫಿ ಮುಖ್ಯಸ್ಥರು) ಒಪ್ಪುತ್ತಾರೆ.

1250 ವರ್ಷಕ್ಕೆ ಆರಂಭದಲ್ಲೇ ಇಂಡೋನೇಶಿಯನ್ನರು, ಅಧಿಕ ಸಂಖ್ಯೆಯಲ್ಲಿ 'ಇಸ್ಲಾಂ'ಗೆ ಮತಾಂತರಗೊಂಡಿದ್ದರು. ಪ್ರತಿಯೊಂದು ಶಕಾರಂಭದಲ್ಲೂ 'ಜಾವ' ರಾಮಾಯಣ ಬರೆಯುವ ಒಂದು ಪದ್ಧತಿಯನ್ನು ಅನುಸರಿಸುತ್ತಿದ್ದರು. ಅಷ್ಟಾದರೂ ಸಹ 'ಯಸಾದಿಪುರ (II) ಹಾಗೂ ಮತ್ತಿತರ ಮುಸ್ಲಿಂ ಕವಿಗಳು 'ವಿಷ್ಣುವಿನ (WISNU) ಅವತಾರಗಳ ವಿಶೇಷಗಳನ್ನು ಬರೆಯುವ ಪದ್ಧತಿಯನ್ನು ನಿಲ್ಲಿಸಲಿಲ್ಲ. ಶ್ರೀರಾಮ ವಿಭೀಷಣನಿಗೆ, ರಾಜನಾದವನು ಹೇಗಿರಬೇಕು, ಅವನ ನಡೆವಳಿಕೆ, ರಾಜ್ಯಭಾರ ಯಾವ ರೀತಿ ನಡೆಸಬೇಕು ಎಂಬುದನ್ನೆಲ್ಲಾ ವಿಶೇಷವಾಗಿ ತಿಳಿವಳಿಕೆ ನೀಡಿದುದನ್ನು 'ಮುಸ್ಲೀಮರಾಜರಿಗೆ' ಕಲಿಸಿಕೊಡಲಾಗಿತ್ತು (ವಿಶೇಷವಾಗಿ). ಅಷ್ಟೇ ಅಲ್ಲ, 'Serat Rama' ವನಗಳಲ್ಲಿಯೇ ವಾಸ ಮಾಡಿಕೊಂಡು, 'ಸಂತ'ನ ಜೀವನವನ್ನು ನಡೆಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದನೆನ್ನಲಾಗಿದೆ! ಅದಕ್ಕೆ ಉತ್ತರವಾಗಿ, ಲಕ್ಷ್ಮಣನು, "ದೇವರೇ, ಬೆಟ್ಟ, ಗುಡ್ಡ, ಕಾಡು, ಮೇಡು ಸೃಷ್ಟಿಸಿದಂತೆಯೇ ಹಳ್ಳಿ-ನಗರಗಳನ್ನು ಸಹ ಸೃಷ್ಟಿಸಿದ್ದಾನೆ. ಆರ್ಥಿಕ, ಪ್ರಾಪಂಚಿಕ, ಪಾರಮಾರ್ಥಿಕ ಎಲ್ಲವೂ ಅವನದೇ ಸೃಷ್ಟಿ! (Material as well as Spiritual) 'ಕ್ಷತ್ರಿಯ' ನಾದವನು ರಾಜನಾಗಿ, ಪ್ರಜಾರಕ್ಷಕನಾಗಿಯೂ, ಹಾಗೂ "ಸಂತ" ನಾಗಿಯೂ ಸನ್ಯಾಸಿಯಾಗಿಯೂ ಇರಬಹುದು". ಸಮೂಹ ಗಾನಗಳು, ಹಾಡುಗಳು, ಪವಿತ್ರ ಗ್ರಂಥಗಳ ಮೂಲಕ ಇಂಡೋನೇಶಿಯದಲ್ಲಿ ಪುರಾತನ ಕಾಲದಿಂದಲೂ 'ರಾಮಾಯಣ'ವನ್ನು ಹೇಳಿ ಕೇಳಿ ಆನಂದಿಸುತ್ತಾ ಬಂದಿದ್ದಾರೆ. 925 ರಲ್ಲಿ "ಯೋಗೀಶ್ವರ' , 2778 ಪದ್ಯಗಳನ್ನೊಳಗೊಂಡ 'ಕೇಕವಿನ್' (KEKAWIN)ರಾಮಾಯಣ ರಚಿಸಿದರು. 1500 ರಲ್ಲಿ 'ಸುಂಡ' ದ್ವೀಪಗಳಲ್ಲಿ ತಾಳೆಗರಿಗಳ ಮೇಲೆ ದಾಖಲಿಸಲ್ಪಟ್ಟಿತು. 17 ನೆಯ ಶತಮಾನದಲ್ಲಿ "ಮಾತರಾಮ್"ನ ರಾಜ , ಇಸ್ಲಾಂ ಮತದ ಪ್ರಚಾರ ಮಾಡಿದನೆನ್ನಲಾಗಿದೆ. ಆದರೆ 'ಶಾಸ್ತ್ರ ಜಂಡ್ ಡಿಂಗ್' (Shastra Gendering) ನಲ್ಲಿ ಅವನು ಬರೆದಿರುವುದು ಏನೆಂದರೆ ಅವನ ರಾಜ್ಯದಲ್ಲಿ ಎಲ್ಲರೂ ಹಳೆಯ ಕವಿಗಳ ಮೂಲ ಗ್ರಂಥಗಳನ್ನು ಕವಿ ಅರಿತಿರಲೇಬೇಕು. ಕಾರಣ 'ಸಂಸ್ಕೃತ'ದಲ್ಲಿರುವ ಹಿಂದು ಪ್ರಾಚೀನ ಗ್ರಂಥಗಳಲ್ಲಿ ಅಡಗಿರುವ 'ಜ್ಞಾನ ಭಂಡಾರ' ದಿಂದಲೇ ಸ್ಫೂರ್ತಿಗೊಂಡ ಕವಿಗಳ ಮೂಲಗ್ರಂಥವೆಂದಿದ್ದಾನೆ. (Kawi Texts).

ಯಸಾದಿಪುರ (I) "ಶ್ರೀರಾಮನ ಬಗ್ಗೆ ಬರೆದಿರುವ ಕವಿಗಳ ಮೂಲಗ್ರಂಥಗಳನ್ನು (Kawi Texts) 'ಸೂಫಿ ಸಾಹಿತ್ಯ'

ಎಂದಿದ್ದಾನೆ. ಅಷ್ಟೇ ಅಲ್ಲ. "ಭೀಮ" (ಸುಸಿ) ಮತ್ತು 'ಅರ್ಜುನ ವಿವಾಹವು" ಸಹ ಇಸ್ಲಾಂ ಪ್ರಾಚೀನ ಗ್ರಂಥಗಳು ಎಂದಿದ್ದಾನೆ. 17ನೆಯ ಶತಮಾನದಲ್ಲಿ ವಾಸಿಸಿರ್ ಪ್ರಾಂತ್ಯ" (ಜಾವ) ದ ಮುಸ್ಲಿಂ ವಿದ್ವಾಂಸರು ಎಲ್ಲಾ ಮತದ ಸಾಧು ಸಂತರ ಜೀವನ ಕಥಾನಕಗಳು, ನಂಬಿಕೆಗಳು, ಪದ್ಧತಿಗಳನ್ನು ಒಟ್ಟುಗೂಡಿಸುವ ಕಾರ್ಯವನ್ನು ಕೈಗೆತ್ತಿಕೊಂಡರು. ಈ ಬೃಹತ್ ವಿಶ್ವದಲ್ಲಿನ 'ಚರಿತ್ರೆ'ಗಳನ್ನು 'ಸೆರತ್ ಕಾಂಡ' (Serat Kanda) ಎಂಬುದಾಗಿ ಹೆಸರಿಸಿದರು. ಇದರಲ್ಲಿ ರಾಮಾಯಣವೂ ಸೇರ್ಪಡೆಯಾಗಿದೆ. ಪೂರ್ವ ಜಾವನೀಸ್ ಪದ್ಯಗಳಲ್ಲಿ 'ಶ್ರೀರಾಮ' ನನ್ನು (KLING) ಕರೆದಿದ್ದಾರೆ. "ರಾಮಕ್ಲಿಂಗ್" "ಬಾಲಿ" ಯಲ್ಲಿ ಶೇಕಡಾ 93 ಜನರು (93%) "ಆಗಮ ಹಿಂದೂ ಧರ್ಮ" ಮತ್ತು ಲೋಂಬೊಕ್ (Lombok) , ರಾಮನ ಕಥೆಗಳು, ರಾಮಾಯಣ ಸಾಸಕ್ (Ramayana Sasak) ಬೆಳೆಯಿತು. The Genealogy given in the book of GENESIS (10:T) - accepted by Jews, Christians and Muslims alike -clearly mentions Raamah. The only difference is that here he is the great - grandson of Cush (ಕುಶ) not his father.

(ಈ ಲೇಖನವನ್ನು ಬರೆದವರು ಫರ್ವೇಜ್ ದೀವಾನ್. (Parvez Dewan) ಅವರು ಐ.ಎ.ಎಸ್ ಆಫೀಸರ್. ನಾನು 2006 ಜಕಾರ್ಟಗೆ ಹೋಗಿದ್ದಾಗ, ತಂದ ಪತ್ರಿಕೆಯ ಈ ತುಣುಕು, ಇತ್ತೀಚೆಗೆ ನನ್ನ ಕೈ ಸೇರಿತು. ಕುತೂಹಲಕಾರಿ ವಿಷಯಗಳು ಶ್ರೀರಾಮನ ಬಗ್ಗೆ ನನ್ನ ಗಮನ ಸೆಳೆಯಿತು. ನಿಮಗಿಷ್ಟವಾಗಬಹುದೆಂದು ಭಾವಿಸಿ ಬರೆದು ಕಳುಹಿಸಿದ್ದೇನೆ.

ಹೊಸವರುಷ ಸಂಕಟ, ಕಷ್ಟ ಸಮಸ್ಯೆಗಳಿಂದ ನೀಡಲಿ ಬಿಡುಗಡೆ, ಭುವನೇಶ್ವರಿಯು ಜಗತ್ ರಕ್ಷಕಿ. ಎಲ್ಲರನ್ನೂ ಕಾಪಾಡು ತಾಯಿ. ನಿನಗೆ ಭಕ್ತಿಪೂರ್ವಕ ನಮಸ್ಕಾರಗಳು)

****

ಪತ್ನಿಯ ಒಂಬತ್ತು ಅವತಾರಗಳು ..

1. ಬೆಳಗ್ಗೆ ಮನೆ ಕೆಲಸದಲ್ಲಿ ಮಗ್ನಳು.

ಆಗ... ಅಷ್ಟಭುಜಾ

2.ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವವಳು

ಆಗ..ಸರಸ್ವತಿ..

3. ಮನೆಯ ಖರ್ಚಿನಲ್ಲಿ ದುಡ್ಡು ಉಳಿಸುವಳು

ಆಗ..ಮಹಾಲಕ್ಷ್ಮಿ

4.ಮನೆಯಲ್ಲಿ ಗೃಹಿಣಿ ಯಾಗಿ ಅಡಿಗೆ ಮಾಡುವವಳು.

ಆಗ...ಅನಪೂರ್ಣ.

5. ಮನೆಯಲ್ಲಿಯ ಸಮಸ್ಯೆ ಗಳನ್ನು ನಿವಾರಿಸುವಳು

ಆಗ..ಪಾರ್ವತಿ .

6. ಮನೆಯಲ್ಲಿ ಯಾರಾದರೂ ಏನಾದರೂ ತಪ್ಪು ಮಾಡಿದರೆ..

ಆಗ.. ದುರ್ಗಾ..

7. ಪೇಟೆಯಿಂದ ಪತಿ ಏನಾದರೂ ತಪ್ಪು ವಸ್ತು ತಂದರೆ..

ಆಗ .. ಕಾಳಿ ಮಾತಾ..

8. ಪತಿ ದೇವರು ತವರು ಮನೆ ಬಗ್ಗೆ ಏನಾದರೂ ಅಸಂಬದ್ಧ ಮಾತಾಡಿದರೆ..

ಆಗ..ಮಹಿಷಾಸುರ ಮರ್ದಿನಿ

9.ಗಂಡ ತಪ್ಪಿ ಏನಾದರೂ ಇನ್ನೊಬ್ಬ ಹೆಣ್ಣಿನ ಗುಣಗಾನ ಮಾಡಿದರೆ..

ಆಗ..ರಣಚಂಡಿ..

ಒಳ್ಳೆಯ ನಶೀಬವಾನ ಗಂಡಂದಿರೇ, ಮನೆಯಲ್ಲಿ ಯೇ ಕುಳಿತು ದೇವಿಯ 9 ಅವತಾರ ದರ್ಶನ ಮಾಡಬಹುದು

ಕನ್ನಡ ಸಾಹಿತ್ಯ ಓದು: ದೇಶೀಯತೆಯ ಸವಾಲುಗಳು

ಡಾ. ಮೇಟಿ ಮಲ್ಲಿಕಾರ್ಜುನ

ದೇಶೀಯತೆ: ಕೆಲವು ಮುಮ್ಮಾತುಗಳು: ದೇಶೀಯತೆ ಕುರಿತ ಚರ್ಚೆಗಳು ಈಗಾಗಲೇ ಸಾಕಷ್ಟು ನಡೆದಿವೆ. ಇವುಗಳಲ್ಲಿ ಹೆಚ್ಚಿನ ಚಿಂತನೆಗಳು ದೇಶೀಯತೆಯನ್ನು ಮಾರ್ಗ ಅಥವಾ ವಸಾಹತುಶಾಹಿಗೆ ಎದುರಾಗಿ/ಪರ್ಯಾಯ ಚಿಂತನಾ ಮಾದರಿಯನ್ನಾಗಿ ಮಂಡಿಸಿವೆ. ಇದನ್ನು ಕನ್ನಡದ್ದೇ ಲಕ್ಷಣವನ್ನಾಗಿ ಚರ್ಚಿಸಿದವರು ಕೆಲವೇ ಕೆಲವು ಅರಿವಿಗರು ಮಾತ್ರ. ಇವರ ಚಿಂತನೆಗಳನ್ನು ನಮ್ಮ ಮುಂದಿನ ಚರ್ಚೆಗೆ ಬಳಸಿಕೊಂಡು ದೇಶೀಯತೆಯ ನಿಲುವುಗಳನ್ನು ಮತ್ತಷ್ಟು ಹಿಗ್ಗಿಸುವ ಜರೂರಿದೆ. ಆದರೆ ಒಂದು ಸಂಗತಿಯನ್ನು ನಾವು ಇಲ್ಲಿಯೇ ನಿಚ್ಚಳಗೊಳಿಸಬೇಕು. ಅದೇನೆಂದರೆ, ದೇಶೀಯತೆ ಕುರಿತ ಚಿಂತನೆಗಳು ಹೆಚ್ಚು ಕಾಡಿರುವುದು ಸಾಹಿತ್ಯ ಓದುಗ ಹಾಗೂ ಅರಿವಿಗರಿಗೆ ಮಾತ್ರ. ಸಾಮಾಜಿಕಶಾಸ್ತ್ರಜ್ಞರು ದೇಶಿಯತೆಗೆ ಬೆನ್ನು ಮಾಡಿಯೇ ಕರ್ನಾಟಕ/ಭಾರತವನ್ನು ಬಿಡಿಸಿ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಇವರು ತಮ್ಮ ಅರಿಕೆ ರೀಸರ್ಚ್ ಹಾಗೂ ಓದಿಗೆ ಸ್ಟಡಿ ಬೇಕಾಗುವ ಚಿಂತನಾ ಕ್ರಮಗಳನ್ನು ಕರ್ನಾಟಕದ ಕಣ್ಣೋಟದಲ್ಲಿ ರೂಪಿಸಿಕೊಳ್ಳುವ ಬದಲಾಗಿ ಎರವಲು ತಂದ ಮಾದರಿಗಳಿಂದ ಪಡೆದುಕೊಂಡಿದ್ದಾರೆ. ಇಂತಹ ಓದಿನ ಬಗೆಗಳು ಕರ್ನಾಟಕವನ್ನು ಅರಿಯುವಲ್ಲಿ ತೊಡಕಾಗುತ್ತವೆ ಎಂಬ ದಿಟವೂ ಇನ್ನೂ ನಮ್ಮರಿವಿಗೆ ಬರದೇ ಇರುವುದು ಸೋಜಿಗದ ಸಂಗತಿಯೇ ಸರಿ. ಸಾಹಿತ್ಯ ಓದಿನಲ್ಲಿಯೂ ಇಂತಹ ಎರವಲು ಮಾದರಿಗಳದೇ ಮೇಲುಗೈ ಎಂಬ ದಿಟವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಇಂತವರ ಕಣ್ಣಲ್ಲಿ ಕನ್ನಡದೇ ಚಿಂತನಾ ಮಾದರಿಗಳನ್ನು ನೆಲೆಗೊಳಿಸುವವರನ್ನು ವಿಲಕ್ಷಣ ಅರಿವಿಗರನ್ನಾಗಿಯೇ ಗುರುತಿಸಿದ್ದಾರೆ. ಇಂತಹ ವಿಪರ್ಯಾಸಗಳು ಚರಿತ್ರೆಯ ಉದ್ದಕ್ಕೂ ಕಾಣಸಿಗುತ್ತವೆ ಎನ್ನುವ ಸಂಗತಿಯನ್ನು ನಾವು ಮೊದಲೇ ಒಪ್ಪಿಕೊಳ್ಳುವುದೇ ಸರಿಯಾದ ನಿಲುವು.
ದೇಶೀಯತೆ ಕುರಿತ ವ್ಯಾಖ್ಯಾನಗಳು ಕೂಡ ಹಲವು ಬಗೆಯಲ್ಲಿ ಹುಟ್ಟಿಕೊಂಡಿವೆ. ದೇಶೀವಾದ ಎಂಬುದು ಮಾರ್ಗಕ್ಕೆ ಎದುರಾಗಿ ಹುಟ್ಟಿಕೊಂಡಿದ್ದರೆ ಅಂತಹ ತಿಳಿವು ಜಾನಪದೀಯ, ಬಾಯ್ದೆರೆಯ, ಸ್ಥಳೀಯವಾದದ್ದು ಎಂದು ಹಾಗೂ ದಂಡಿ ತನ್ನ ಕಾವ್ಯದರ್ಶದಲ್ಲಿ ದೇಸಿಯನ್ನು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಮಾತನಾಡುವ ಉಪಭಾಷೆ ಎಂದು ವಿವರಿಸಿದ್ದಾನೆ. ಈ ಬಗೆಯ ನಿರ್ವಚನೆಯನ್ನು ಕೆ.ವಿ.ಎನ್. ಅವರು ಮಾರ್ಗ ಸಾಪೇಕ್ಷಿಯಾದ ಪರಿಕಲ್ಪನೆ ಎಂದಿದ್ದಾರೆ. ವಸಾಹತುಶಾಹಿಗೆ ಎದುರಾಗಿ ಬೆಳೆದು ಬಂದ ದೇಶೀವಾದವನ್ನು ವಸಾಹತೋತ್ತರ ಚಿಂತನಾ ಮಾದರಿಯನ್ನಾಗಿ ಗುರುತಿಸಲಾಗಿದೆ. ಈ ಎರಡೂ ಬಗೆಯ ವ್ಯಾಖ್ಯಾನಕ್ಕೆ ಹೊರತಾದ ನೆಲೆಯಿಂದ ದೇಶೀವಾದವನ್ನು ಈಗೀನ ಬೇರೊಂದು ಬಗೆಯಲ್ಲಿ ಗುರುತಿಸಲಾಗಿದೆ. ಅದೇನೆಂದರೆ, ದೇಶೀಯತೆ ಎಂಬುದು ತನ್ನತನದ ಹುಡುಕಾಟದ ನೆಲೆಯಾಗಿ ಆಯಾ ಸಮುದಾಯದ ಸಾಂಸ್ಕೃತಿಕ ಸ್ವಂತಿಕೆ ಹಾಗೂ ಅಭಿವ್ಯಕ್ತಿಯ ಗುರುತುಗಳನ್ನು ಕಂಡುಕೊಳ್ಳುವುದಾಗಿದೆ. ದೇಶೀಯತೆ ಎನ್ನುವುದು ಸ್ವಂತಿಕೆಯ ನೆಲೆಯಾಗಿ ಬೆಳೆಯದೇ ಕೇವಲ ಬದಲಿ ಮಾದರಿಯಾಗಿ ರೂಪಗೊಂಡಿದ್ದರಿಂದ, ಅದನ್ನು ಅತ್ಯಂತ ಸಂಕುಚಿತ ಅರ್ಥದಲ್ಲಿ ಬಳಸುವುದಕ್ಕೆ ಕಾರಣವಾಗಿತ್ತು. ದೇಶೀಯತೆಯ ಕಲ್ಪನೆ ಬೆಳೆದು ಬಂದ ಬಗೆಗಳನ್ನು ಈ ಕೆಳಗಿನಂತೆ ಮೂರು ಬಗೆಗಳಾಗಿ ಗುರುತಿಸಬಹುದು;

1. ಮಾರ್ಗ ಸಾಪೇಕ್ಷಿಯಾದ ಚಿಂತನೆ
2. ವಸಾಹತೋತ್ತರ ಚಿಂತನಾಕ್ರಮ
3. ತನ್ನತನದ ಹುಡುಕಾಟದ ನೆಲೆ

ಒಟ್ಟಿನಲ್ಲಿ ದೇಶೀವಾದ ಎನ್ನುವುದು ಸಾಂಸ್ಕೃತಿಕ ತನ್ನತನವನ್ನು ಬಿಡಿಸಿ ನೋಡುವ ಆಲೋಚನಾಕ್ರಮ, ಲೋಕಗ್ರಹಿಕೆಯ ಬಗೆಯೆಂದು ಗುರುತಿಸಬಹುದು. ಈ ಬಗೆಯ ದೇಶೀ ಚಿಂತೆಗಳು ಕವಿರಾಜಮಾರ್ಗಕಾರನ ಕಾಲದಿಂದಲೂ ನಡೆದಿದ್ದರೂ ಅವುಗಳ ನಡುವೆ ಹೊಂದಾಣಿಕೆಯನ್ನು ಬೆಸೆಯುವ ಓದುಗಳು ನಡೆಯದೇ ಇರುವುದು ಸಾಂಸ್ಕೃತಿಕ ಅಪಾಯಕ್ಕೆ ಕಾರಣವಾಗಿದೆ. ಮಾರ್ಗಕಾರ ಕನ್ನಡದ ಗುಣಗಳನ್ನು ಹೇಗೆ ಗುರುತಿಸಿದ್ದಾನೆ ಎಂಬ ತಿಳಿವನ್ನು ಕಂಡುಕೊಳ್ಳುವ ಬದಲಾಗಿ ಅವನು ದಂಡಿಯ ಕಾವ್ಯಾದರ್ಶದಿಂದ ಏನೆಲ್ಲವನ್ನು ನಕಲು ಮಾಡಿದ್ದಾನೆ ಎಂಬ ಆರೋಪಗಳೇ ತೀವ್ರವಾಗಿ ನಡದಿವೆ. ಈ ಬಗೆಯ ಓದು ಕನ್ನಡತನವನ್ನು ರೂಪಿಸಲು ತೊಡಕಾಗಿದೆ ಎನ್ನುವುದಕ್ಕಿಂತ ಇದೇ ಸರಿಯಾದ ಓದುಯೆಂದು ಒಪ್ಪಿ ನಡೆದವರು ಚರಿತ್ರೆಯುದ್ದಕ್ಕೂ ಕಾಣಸಿಗುತ್ತಾರೆ.
ನಮ್ಮ ಪಕ್ಕದ ಮನೆಮಾತುಗಳಲ್ಲಿ ದೇಶೀಯತೆ ರೂಪಗೊಂಡ ಬಗೆ: ಮರಾಠಿ ಸಾಹಿತ್ಯ ಮೀಮಾಂಸೆಯಲ್ಲಿ ಬಾಲಚಂದ್ರ ನೇಮಾಡೆಯವರು ದೇಶೀವಾದ ಎಂಬ ಅರಿಮೆ ಪದವನ್ನು ನೆಲೆಗೊಳಿಸಿದರು. ಇಂಗ್ಲಿಶಿನ ನೇಟಿವಿಸಮ್ ಎಂಬ ರೂಪದಿಂದ ಮರಾಠಿಯಲ್ಲಿ ಈ ದೇಶೀವಾದ ಎಂಬ ರೂಪವನ್ನು ಕಡ ತಂದು ಬೆಳಸಿದರು. ಇಂತಹ ಆಲೋಚನಾ ಕ್ರಮದ ಅಗತ್ಯಕ್ಕೆ ಇಂಗ್ಲಿಷಿನ ಪ್ರಾಬಲ್ಯವೇ ಕಾರಣವೆಂಬುದು ಗಮನಾರ್ಹ ಸಂಗತಿ. ಆದರೆ ದೇಶೀವಾದ ಎಂಬ ವಿಮರ್ಶಾ ಮಾದರಿಗಳು ಪಾಶ್ಚಿಮಾತ್ಯ ಸಾಹಿತ್ಯ ಸಂದರ್ಭದಲ್ಲಿ ಕಾಣಲು ಸಾಧ್ಯವಿಲ್ಲ ಎಂಬ ವಾದವೂ ಇದೆ. ದೇಶೀವಾದ ಎಂಬ ತಿಳಿವಿನ ಮಾದರಿ ಪಾಶ್ಚಿಮಾತ್ಯರಲ್ಲಿ ಬೆಳೆದಿರುವುದು ರಾಚನಿಕ ಮಾನವಶಾಸ್ತ್ರೀಯ ಓದುಗಳಲ್ಲಿ ಮಾತ್ರ. ಹಾಗಾಗಿ ನೇಮಾಡೆಯವರು ದೇಶೀವಾದ ವಿಮರ್ಶಾ ನೆಲೆಗಳನ್ನು ಮಾನವಶಾಸ್ತ್ರೀಯ ಪ್ರೇರಣೆ ಹಾಗೂ ಕಣ್ಣೋಟದಲ್ಲಿ ರೂಪಿಸಿಕೊಂಡರೆಂದು ಹೇಳಲಾಗಿದೆ. ಕನ್ನಡ ದೇಶೀವಾದದ ಕಲ್ಪನೆಯು ಇಂತಹ ಪ್ರೇರಣೆಗಳಿಂದ ಹುಟ್ಟಿದ್ದಲ್ಲ ಎಂಬುದು ಗಮನಾರ್ಹ. ಹಾಗಾಗಿ ನೇಮಾಡೆಯವರ ದೇಶೀವಾದವೇನು ಹೊಸ ಬಗೆಯ ಚಿಂತನಾ ಮಾದರಿಯಲ್ಲ ಎನ್ನುವ ಮಾತುಗಳೂ

ಬಲವಾಗಿಯೇ ಕೇಳಿ ಬರುತ್ತವೆ. ಮಾನವಶಾಸ್ತ್ರಜ್ಞರ ಪ್ರಕಾರ ದೇಶೀ ಎನ್ನುವುದು ಇಂಡಿಜಿನಿಯಸ್ ಎಂಬ ಕಲ್ಪನೆಯಿಂದ ಸಾಧಿತವಾಗಿದೆ. ಬಿಳಿಯರಿಗೆ ಅನ್ಯವಾದ/ಹೊರತಾದ ಸಾಂಸ್ಕೃತಿಕ ಆಚರಣೆ ಮತ್ತು ಚಹರೆಗಳನ್ನೇ ದೇಶೀಯ ಲಕ್ಷಣಗಳನ್ನಾಗಿ ರೂಪಿಸಿದ್ದಾರೆ. ಎತ್ತುಗೆಗಾಗಿ ಆದಿವಾಸಿಗಳು ಉಡುಪು ಹಾಕಿಕೊಳ್ಳದೇ ಇರುವ ನೆಲೆಯನ್ನು ಅವರ ದೇಶೀ ಲಕ್ಷಣವನ್ನಾಗಿ ನಾಗರಿಕ / ಮುಖ್ಯವಾಹಿನಿ ಸಮುದಾಯಗಳು ಗುರುತಿಸಿವೆ. ಅಂದರೇನಾಯ್ತು, ಯಜಮಾನ ಸಮುದಾಯಗಳಿಗೆ ಹೊರತಾದ ಇಲ್ಲ ಬೇರೆಯಾದ ಸಾಮಾಜಿಕ – ಸಾಂಸ್ಕೃತಿಕ ಗುಣಗಳೇ ದೇಶೀಯ ಚಹರೆಗಳಾಗಿ ನೆಲೆಗೊಂಡವು. ಎತ್ತುಗೆಗಾಗಿ ಕನ್ನಡ ಬಾಯ್ದೆರೆಯ ಪರಂಪರೆಯನ್ನು ಜನಪದ ಇಲ್ಲ ದೇಶೀಯೆಂದು ಕರೆಯಲೂ, ಇದು ಬರೆಹ ಪರಂಪರೆಗೆ ಹೊರತಾದದ್ದು ಎನ್ನುವುದೇ ಕಾರಣವಾಗಿದೆ. ನೇಮಾಡೆಯವರು ದೇಶೀವಾದವನ್ನು ಕೇವಲ ಸಾಹಿತ್ಯ ಓದಿನ ಮಾದರಿಯನ್ನಾಗಿ ರೂಪಿಸುವುದಷ್ಟೇ ಅಲ್ಲ ಅದನ್ನೊಂದು ಸಾಹಿತ್ಯಕ ಮೌಲ್ಯವನ್ನಾಗಿ ರೂಪಿಸಿದ ಇರಾದೆಯನ್ನು ಹೊಂದಿದ್ದರು. ಇಂತಹ ಓದಿನ ಮಾದರಿಗಳನ್ನು ಹುಟ್ಟು ಹಾಕುವುದರಿಂದ ನೇಮಾಡೆಯವರಿಗೆ ಒಂದು ನೆಗೆತ ಸಿಕ್ಕಿತು ಹಾಗೂ ಅದನ್ನು ಅವರು ತಮ್ಮ ಐಡೆಂಟಿಟಿ ಕ್ರೈಸಿಸ್‌ಅನ್ನು ನೀಗಿಸಿಕೊಳ್ಳುವ ನೆಲೆಯನ್ನಾಗಿಯೂ ಮಾಡಿಕೊಂಡರು ಎನ್ನುವ ಆರೋಪಗಳಿವೆ. ದೇಶೀವಾದವು ಯಾವ ಸಾಹಿತ್ಯಕ ಹಿರಿಮೆ ಹಾಗೂ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ? ಕೇವಲ ದೇಶೀವಾದದಂತಹ ಕಲ್ಪನೆಗಳನ್ನು ಅನ್ವಯಿಸಿ ಸಾಹಿತ್ಯವನ್ನು ಓದುವುದರಿಂದ ಸಿಗುವ ಲಾಭವಾದರೂ ಏನು? ಎಂಬ ಕೇಳ್ವಿಗಳು ಎದುರಾಗಿವೆ. ಈ ಕೇಳ್ವಿಗಳಿಗೆ ನೇಮಾಡೆಯವರ ಹತ್ತಿರ ಯಾವುದೇ ನಿಶ್ಚಿತ ಬದಿಲುಗಳು ಇರಲಾರವು ಎನ್ನುವ ಅನುಮಾನಗಳೂ ಹುಟ್ಟಿವೆ. ಇದೊಂದು ರೀತಿಯಲ್ಲಿ ಸಾಂಸ್ಕೃತಿಕ-ಸಾಹಿತ್ಯಕ ಖಾಲಿತನ, ಸಂಕುಚಿತ ರಾಷ್ಟ್ರೀಯತೆಯ ಕಲ್ಪನೆ, ಸಾಹಿತ್ಯ, ಚರಿತ್ರೆ ಹಾಗೂ ಪರಂಪರೆಯ ಅನುಭವದ ಕೊರತೆಯಿಂದ ಇಂತಹ ಜೇನ್ನೋಣದ ಧೋರಣೆಗಳು ಮೂಡುತ್ತವೆ. ಅಂದರೆ ಜೇನ್ನೋಣ ತನ್ನ ಸೀಮಿತತೆಯಲ್ಲಿಯೇ ಝೇಂಕರಿಸುತ್ತ ತಣಿವಿನಿಂದ ಇರುತ್ತದೆ. ಇದೊಂದು ಪ್ರತ್ಯೇಕತಾ ಮನೋಕಲ್ಪನೆಯನ್ನು ಮಾನವಶಾಸ್ತ್ರದ ಪ್ರೇರಣೆ ಹಾಗೂ ಕಣ್ನೋಟದಿಂಥ ರೂಪಿಸಿಕೊಂಡಿರುವುದೇ ಇಂತಹ ಅನುಮಾನಗಳು ಹುಟ್ಟಲು ಕಾರಣವಾಗಿದೆ ಎಂದು ಅನ್ನಿಸುತ್ತದೆ.

ಭಾರತೀಯತೆ ಎಂಬ ಏಕರೂಪೀತನ: ಯಜಮಾನ ಸಂಸ್ಕೃತಿ ಅಥವಾ ಸಾಹಿತ್ಯ ತನ್ನನ್ನು ಮಾತ್ರ ಅನುಕರಿಸುವಂತೆ ಒತ್ತಾಯಿಸುತ್ತಲೇ ತಾನು ಯಜಮಾನಿಕೆ ನಡೆಸುವ ಆಯಾ ಸಮುದಾಯಗಳ ಚಾರಿತ್ರಿಕ ನೆನಪುಗಳನ್ನೇ ಮರೆಮಾಚುತ್ತದೆ. ಇಂತಹ ಸಾಂಸ್ಕೃತಿಕ ಮುಖಾಮುಖಿಯಲ್ಲಿ, ತನ್ನತನದ ನೆಲೆಗಳು ನಾಶವಾಗುವಲ್ಲಿ ವಿಸ್ಮೃತಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸುತ್ತದೆ. ತೊಂಭತ್ತರ ದಶಕದಲ್ಲಿ ಬಂದ ಜಿ. ಎನ್. ದೇವಿ ಅವರ 'ಆಫ್ಟರ್ ಅಮ್ನೇಶಿಯಾ' ಎಂಬ ಹೊತ್ತಿಗೆಯಲ್ಲಿ ಈ ಬಗೆಯ ಚರ್ಚೆಗಳನ್ನು ಕಾಣಬಹುದು. ಭಾರತದ ಹೊಸಗಾಲದ ದೇಶೀ ನುಡಿಗಳಲ್ಲಿ ಅಡಕವಾಗಿರುವ ಸಾಹಿತ್ಯಕ ವಿದ್ವತ್ತನ್ನು ಕುರಿತು ದೇವಿಯವರು ಅತ್ಯಂತ ತೀಕ್ಷ್ಣವಾಗಿ ಚರ್ಚಿಸುತ್ತಲೇ, ಆ ನುಡಿಗಳಿಗೆ ಸಾಂಸ್ಕೃತಿಕ ಮರೆವು ಹೇಗೆ ಎದುರಾಯ್ತು ಎಂಬುದನ್ನು ಗುರುತಿಸಿದ್ದಾರೆ. ಅದೇನೆಂದರೆ, ಸಂಸ್ಕೃತ ಸಾಹಿತ್ಯ ಪರಂಪರೆಯ ಮಧ್ಯಕಾಲೀನ ನಂತರದ ಸನ್ನಿವೇಶದಲ್ಲಿಯೂ ದೇಶೀ ನುಡಿಗಳ ಸಾಹಿತ್ಯಕ ಮೀಮಾಂಸೆಯನ್ನು ಹೇಗೆ ನಿರಾಕರಿಸಲ್ಪಟ್ಟಿದೆ. ಹಾಗೂ ಅಂತಹ ನಿರಾಕರಣೆಯೇ ಆ ನುಡಿಗಳ ಮರೆವಿನ ನೆಲೆಯಾಗಿ "learn to forget" ಹೇಗೆ ರೂಢಿಗೊಂಡಿತು ಎಂಬುದನ್ನೂ ವಿವರಿಸುತ್ತಾರೆ. ಮತ್ತು ಪಾಶ್ಚಿಮಾತ್ಯ ಅಥವಾ ಸಂಸ್ಕೃತ ಪರಂಪರೆಗಳಲ್ಲಿ ಬೇರೂರಿದ ಬೌದ್ಧಿಕ ಆಚರಣೆಗಳು ಸಾಂಸ್ಕೃತಿಕವಾಗಿ ಬೇರೆ ಬೇರೆಯಾಗಿದ್ದರೂ, ಅವುಗಳ ಎದುರಲ್ಲಿ ದೇಶೀ ನುಡಿಗಳಲ್ಲಿರುವ ಬೌದ್ಧಿಕತೆ ಎಂತಹ ಹುಸಿ ಸಂಗತಿ ಎಂದು ಅವಷ್ಟಕ್ಕೆ ಅವು ಹೇಗೆ ಬೀಗುತ್ತಿದ್ದವು ಎನ್ನುವುದನ್ನು ಚರ್ಚಿಸುತ್ತಾರೆ. ಭಾರತದೇಶದ ಸಾಹಿತ್ಯಕ ಚರಿತ್ರೆಯನ್ನು ಸರಿಯಾಗಿ ರೂಪಿಸಿದರೆ, ಇಲ್ಲಿಯ ದೇಶೀ ನುಡಿಗಳ ಸಾಹಿತ್ಯಕ ಮೀಮಾಂಸೆ ಏನೆಲ್ಲ ಬಿಕ್ಕಟ್ಟುಗಳನ್ನು ಎದುರಿಸಿವೆ ಎಂಬ ದಿಟವನ್ನು ತಿಳಿಯಬಹುದು ಎಂಬ ಚಿಂತನೆಗಳನ್ನೂ ದೇವಿಯವರು ತಮ್ಮ ಹೊತ್ತಿಗೆಯಲ್ಲಿ ಮಂಡಿಸುತ್ತಾರೆ. ಆದರೆ, ದೇವಿಯವರ ಈ ವಿಸ್ಮೃತಿ ಕಲ್ಪನೆಯ ನಿಗಾಯಿರುವುದು ಇಂಡಾಲಜಿಸ್ಟರು ದೇಶೀ ನುಡಿಗಳನ್ನು ಹೊರಗಿಟ್ಟು ಸಂಸ್ಕೃತ ಸಾಹಿತ್ಯ ಪರಂಪರೆಗೆ ಎಷ್ಟೊಂದು ಮಹತ್ವಕೊಟ್ಟಿದ್ದರು, ಅದರಿಂದ ಹೊಸಗಾಲದ ನುಡಿಗಳ ಸಾಂಸ್ಕೃತಿಕ ಕಸುವು ಹೇಗೆ ಮರೆವಿಗೆ ಸರಿಯಿತು ಎಂಬೆಲ್ಲ ಸಂಗತಿಗಳ ಕಡೆಯಿದೆ. ಹಾಗೂ ಒಳನುಡಿ, ದೇಶೀನುಡಿಗಳು ಕಣ್ಮರೆಯಾದರೆ, ಇದರಿಂದ ಏನೆಲ್ಲ ಸಾಂಸ್ಕೃತಿಕ ಅಪಾಯಗಳು ಆಗಬಹುದು ಎಂಬುದನ್ನು ಚರ್ಚಿಸುತ್ತಾರೆ. ದೇಶೀ ತಿಳಿವಿನ ನಾಶ ಹೇಗಾಗುತ್ತೆಂಬುದು ಇವರ ಈ ಚಿಂತನೆಗಳಲ್ಲಿ ಅಡಕವಾಗಿದ್ದರೂ, ಭಾರತೀಯ ಪರಂಪರೆ ಹಾಗೂ ಜ್ಞಾನಶಾಖೆಗಳ ಪುನರುತ್ಥಾನದ ಹಳಹಳಿಕೆಗೆ ಮಾತ್ರ ಇಲ್ಲಿ ಹೆಚ್ಚು ಒತ್ತು ಸಿಕ್ಕಿದೆ. ಹಾಗಾಗಿ ಇವರ ಈ ಚರ್ಚೆಗಳು ದೇಶೀಯತೆಯ ನಿಲುವುಗಳ ಬಗೆಗೆ ನಿಚ್ಚಳವಾದ ಯಾವುದೇ ಹೊಳವುಗಳನ್ನು ಕೊಡಲಾರವು. ಬದಲಾಗಿ ದೇಶೀ ನುಡಿಗಳ ಕಣ್ಮರೆಯ ಪರಿಣಾಮವಾಗಿ ಆ ನುಡಿಗಳಲ್ಲಿ ಹುದುಗಿರುವ ತಿಳಿವು ಹೇಗೆ ನಾಶವಾಗುತ್ತೆ. ಇಂತಹ ಸಾಂಸ್ಕೃತಿಕ ಅಪಾಯವನ್ನು ಕುರಿತು ದೇವಿಯವರು ಚರ್ಚಿಸುತ್ತಾರೆ. ಇಂತಹ ಅಪಾಯಗಳನ್ನು ಕುರಿತು ಚರ್ಚಿಸುವುದೇ ದೇಶೀಯತೆಯನ್ನು ಕುರಿತು ಚರ್ಚಿಸಿದಂತಲ್ಲ. ಈ ಚರ್ಚೆಗಳಿಗೆ ಪೂರಕವಾಗಿ ಪ್ರಭುತ್ವ ಜಾಗತೀಕರಣ ಹಾಗೂ ಯಜಮಾನ ಸಂಸ್ಕೃತಿಗಳು ಹುಟ್ಟು ಹಾಕಿದ ಹಿಂಸೆಯನ್ನೂ ದೇವಿಯವರು ಬಿಡಿಸಿ ನೋಡಿದ್ದಾರೆ. ಆದರೆ ಈ ಯಾವ ತಿಳುವಳಿಕೆಗಳೂ ಕೂಡ ತನ್ನತನವನ್ನು ಮರುರೂಪಿಸುವ ನೆಲೆಗಳಾವುವು ಎಂಬುದನ್ನು ಎತ್ತಿ ತೋರಿಸುವ ಗೋಜಿಗೆ ಹೋಗುವುದಿಲ್ಲ. ಜಿ.ಎನ್.ದೇವಿಯವರು ದೇಶೀಯತೆಯ ಕಲ್ಪನೆಯಯನ್ನು ಸಾಂಸ್ಕೃತಿಕ ವಿಸ್ಮೃತಿಯ ನೆಲೆಯನ್ನಾಗಿಯೂ ಗುರುತಿಸಲಾಗಿದೆ. ಪರಿಣಾಮವಾಗಿ

ಕನ್ನಡದಲ್ಲಿಯೂ ಸಾಕಷ್ಟು ಓದುಗಳು ಬೆಳೆದು ಬಂದಿವೆ. ಇವರ 'ಆಫ್ಟರ್ ಅಮ್ನೇಶಿಯಾ' ಎಂಬ ಹೊತ್ತಿಗೆಯ ಚರ್ಚೆಗಳು ಕೂಡ ದೇಶೀಯತೆಯನ್ನೇ ಬಲಪಡಿಸುತ್ತವೆ ಎಂಬ ನಂಬಿಕೆಯೇ ಇದಕ್ಕೆ ಕಾರಣ. ತೊಂಭತ್ತರ ದಶಕದ ನಂತರ ದೇಶಿಯತೆ ಕುರಿತ ಚರ್ಚೆಗಳಿಗೆ ದೇವಿಯವರ ಈ ಚಿಂತನೆಗಳಿಂದ ಮತ್ತೊಂದು ಮಗ್ಗಲು ಸಿಕ್ಕಿದ್ದರೂ, ಅದು ಭಾರತೀಯತೆ ಎಂಬ ದೇಶೀವಾದವನ್ನು ನೆಲೆಗೊಳಿಸುವುದಾಗಿದೆ. ಏಕೆಂದರೆ, ಗುಜರಾತಿ ಹಾಗೂ ಮರಾಠೀ ದೇಶೀ ನುಡಿಗಳ ಸಾಹಿತ್ಯಕ-ಸಾಂಸ್ಕೃತಿಕ ಕಸುವು ಕುರಿತ ಚರ್ಚೆಗಳು ಸಂಸ್ಕೃತದ ನೆರಳಲ್ಲಿ ಗುರುತಿಸುವ ಸುಳುವುಗಳು ಈ ಹೊತ್ತಿಗೆಯಲ್ಲಿ ಅಡಕವಾಗಿವೆ. ಹಾಗಾಗಿ ಭಾರತೀಯತೆ ಎಂಬ ಈ ಹೊದಿಕೆಯ ಕಲ್ಪನೆಯಲ್ಲಿ ಗುಜರಾತ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಚಹರೆಗಳೇ ಕಣ್ಮರೆಯಾಗುತ್ತವೆ ಎಂಬ ದಿಟವೂ ನಮ್ಮ ಎಷ್ಟೋ ದೇಶೀ ಚಿಂತಕರಿಗೆ ಅರ್ಥವಾಗಲಿಲ್ಲ. ದೇವಿಯವರ ಈ ವಿಸ್ಮೃತಿಯ ಕುರಿತ ನಿಲುವುಗಳು ವಸಾಹತುಶಾಹಿ ಮೂಲದ ಜ್ಞಾನಶಿಸ್ತುಗಳ ಪ್ರಾಬಲ್ಯದಿಂದ ಭಾರತೀಯ ಮೂಲದ ಜ್ಞಾನಶಿಸ್ತುಗಳು ವಿಸ್ಮೃತಿಗೆ ಸೇರಿವೆ ಎಂಬ ಹಪಾಹಪಿಗೆ ಕಾರಣವಾಗಿವೆ ಎಂಬುದಾಗಿದೆ. ಇಲ್ಲಿ ಭಾರತೀಯತೆ ಅಂದರೆ ಸಂಸ್ಕೃತವೆಂದರ್ಥವೇ ಹೊರತು ಭಾರತದ ಬೇರೆ ಬೇರೆ ನುಡಿ ಸಮುದಾಯಗಳೆಂದರ್ಥವಲ್ಲ. ಇಂತಹ ವಿಚಾರಗಳೂ ಕೂಡ ನಮ್ಮ ಅರಿವಿಗೆ ಯಾಕೆ ತಾಕಲಿಲ್ಲ? ಇಂತಹ ಸಂಗತಿಗಳನ್ನು ಅರಿಯದೇ ಇರುವುದು ಕೂಡ ವಿಸ್ಮೃತಿ ಹೇಗೆ ಆವರಿಸಿದೆ ಅನ್ನುವದನ್ನೇ ಸೂಚಿಸುತ್ತದೆ.

ವಸಾಹತೋತ್ತರ ಚಿಂತನಾ ಕ್ರಮಕ್ಕೆ ಎದುರಾಗಿ ದೇಶೀಯತೆ: ತನ್ನತನದ ನೆಲೆಗಳನ್ನು ಕಳೆದುಕೊಳ್ಳುವುದನ್ನು ಎರಡು ಬಗೆಗಳಲ್ಲಿ ಗುರುತಿಸುತ್ತಾರೆ. ಸಮುದಾಯವನ್ನೇ ತುಂಡು ತುಂಡಾಗಿಸಿ ಅದರ ಗುರುತುಗಳನ್ನೇ ನಾಶ ಮಾಡುವುದು ಒಂದು ಬಗೆಯಾದರೆ, ಈಗಾಗಲೇ ನೆಲೆನಿಂತಿರುವ ಯಾವುದೆ ಒಂದು ಮುಖ್ಯವಾಹಿನಿ ಸಮುದಾಯದೊಂದಿಗೆ ಇತರ ಸಮುದಾಯಗಳನ್ನು ಬೆರೆಸಿ ಆಯಾ ಸಮುದಾಯಗಳ ಯಾವುದೇ ತನಿಯ ಚಹರೆಗಳನ್ನು ಇಲ್ಲವಾಗಿಸುವುದು ಮತ್ತೊಂದು ಬಗೆಯಾಗಿದೆ. ಹೀಗೆ ತಾನು ಬೆರತುಗೊಂಡ ಸಮುದಾಯದ ಗುರುತುಗಳನ್ನೇ ತನ್ನ ಗುರುತನ್ನಾಗಿ ಒಪ್ಪಿಕೊಳ್ಳುವುದು ಸೋಜಿಗದ ಸಂಗತಿಯಾಗಿ ಕಂಡರೂ ಇದುವೇ ದಿಟ. ವಸಾಹತುಶಾಹಿ ವಾದಗಳಿಗೆ ಪ್ರತಿಕ್ರಿಯಿಸಿದ ನಮ್ಮ ಎಷ್ಟೊ ಸಂಸ್ಕೃತಿ ತಿಳಿವಿಗರು ನಮ್ಮ ಸಮುದಾಯಗಳನ್ನೇ ಮರುಮೌಲ್ಯಮಾಪನಕ್ಕೆ ಒಗ್ಗಿಸುವ ಅಗತ್ಯವನ್ನು ಗುರುತಿಸಿದರು. ಇಂತಹ ನೆಲೆಗೆ ಮುಖ್ಯ ಕಾರಣವೇ ಆಯಾ ಸಮುದಾಯಗಳಲ್ಲಿ ಅಡಕವಾಗಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಗುರುತಿಸುವುದಾಗಿತ್ತು. ಹಾಗೂ ಆ ಮೌಲ್ಯಗಳು ಹೇಗೆ ಒಂದು ಸಮುದಾಯದ ಚಹರೆಗಳಾಗುತ್ತವೆ ಎಂಬುದನ್ನೂ ಅರಿಯಬೇಕಾಗಿತ್ತು. ಇದನ್ನೇ ಕೆಲವರು ವಸಾಹತ್ತೋತ್ತರ ಚಿಂತನೆಯೆಂದು ಕರೆದರೆ ಮತ್ತೆ ಕೆಲವರು ಇದನ್ನೇ ದೇಶೀವಾದವೆಂದು ತೀರ್ಮಾನಿಸಿದರು. ಇಂತಹ ಬಡಬಡಿಕೆಗಳನ್ನೇ ವಸಾಹತ್ತೋತ್ತರ ಚಿಂತನೆಯ ಬೇರೆ ಬೇರೆ ಮಾದರಿಗಳನ್ನಾಗಿ ಗುರುತಿಸಿದ ನೆಲೆಗಳೂ ಇವೆ. ಇವುಗಳನ್ನು ದೇಶೀವಾದ ಮೆಟ್ರೋಪಾಲಿಟಿನ್ ಹಾಗೂ ಎಕ್ಲೆಟಿಸಿಮ್ ಎಂಬಿತ್ಯಾದಿ ಚಿಂತನಾ ಮಾದರಿಗಳನ್ನಾಗಿ ಬಣ್ಣಿಸಿದ್ದಾರೆ. ಹಾಗೂ ದೇಶೀ ಸಮುದಾಯಗಳನ್ನು ಚರಿತ್ರೆಯುದ್ದಕ್ಕೂ ಮೂಗರನ್ನಾಗಿಸಲಾಗಿತ್ತು ಎಂದು ಮೆಟ್ರೋಪಾಲಿಟನ್ ವಾದವು ಹೇಳುತ್ತದೆ ಎನ್ನುವ ನಂಬಿಕೆಗಳೂ ಮಂಚೂಣಿಗೆ ಬಂದಿವೆ. ದೇಶೀ ಸಮುದಾಯಗಳಿಗೆ ಅವರದೇ ನುಡಿಗಳಲ್ಲಿ ಅಭಿವ್ಯಕ್ತಿಸುವ ದಾರಿಗಳಾಗಲಿ ಇಲ್ಲ ನುಡಿಗಟ್ಟುಗಳಾಗಲಿ ಇರಲಿಲ್ಲ. ಅದಕ್ಕಾಗಿ ಈ ಸಮುದಾಯಗಳು ತಮ್ಮ ಮೇಲೆ ಪ್ರಾಬಲ್ಯವನ್ನು ಸಾಧಿಸಿದವರಿಗೆ ಎದುರಾಗಿ ಮಾತನ್ನಾಡುವ ಕಸುವನ್ನು ಕಳೆದುಕೊಂಡಿದ್ದವು. ಹಾಗಾಗಿ ಅವುಗಳು ತಮ್ಮನ್ನು ಆಳುವ ಯಜಮಾನನ ನುಡಿಗಳನ್ನು ಬಳಸುತ್ತಿದ್ದವು ಹಾಗೂ ಆ ನುಡಿಗಳಿಂದಲೇ ತಮ್ಮ ಏಳ್ಗೆಯನ್ನು ಬಯಸುತ್ತಿದ್ದವು. ಇಂತಹ ಪರಾವಲಂಬನೆ ಹಾಗೂ ಹಂಗಿನಿಂದ ಬಿಡುಗಡೆಗೊಂಡು, ಸಾಂಸ್ಕೃತಿಕ ಸ್ವಾಯತ್ತತೆಯನ್ನು ತರುವ ಪಣತೊಟ್ಟಿದ್ದವು ಎನ್ನುವ ನಂಬಿಕೆಗಳೂ ಇಂತಹ ಚಿಂತನೆಗಳಲ್ಲಿ ಹುದುಗಿರುವುದು ದಿಟ. ಆದರೆ ಈ ಚಿಂತನಾಧಾರೆಯನ್ನು ಪ್ರತಿನಿಧಿಸುವವರು ಆರಿಸಿಕೊಂಡ ಹಾದಿಗಳು ಮಾತ್ರ ಇನ್ನ್ಯಾವುದೋ ಗುರಿ ಮುಟ್ಟುವ ತುಡಿತದಲ್ಲಿದ್ದವು ಎಂಬುದನ್ನು ಮರೆಯುವಂತಿಲ್ಲ.

ಇದು ಯಜಮಾನ ನುಡಿಯ ಏಳ್ಗೆ ಮತ್ತು ಆಸಕ್ತಿಯನ್ನು ಬೆಳೆಸುವ ಬಗೆ ಮಾತ್ರವಾಗದೇ, ಆಯಾ ನುಡಿ ಹಾಗೂ ಸಮುದಾಯಗಳಿಗೆ ರಾಷ್ಟ್ರೀಯ/ಅಂತರಾಷ್ಟ್ರೀಯ ಅನನ್ಯತೆಯನ್ನು ರೂಪಿಸುವ ನೆಲೆಯೂ ಆಗಿತ್ತು. ಈ ನುಡಿಗಳು ತಮ್ಮ ಗಡಿಗೆರೆಗಳನ್ನು ಹಿಗ್ಗಿಸಿಕೊಳ್ಳಲು ಸಂಕರ ಪ್ರಕ್ರಿಯೆಯನ್ನು ಬೆಂಬಲಿಸುತ್ತಿದ್ದರೂ, ದೇಶೀ ನುಡಿಗಳ ಅಸ್ತಿತ್ವವನ್ನು ಗಟ್ಟಿಗೊಳಿಸುವ ಅವಕಾಶವನ್ನು ಯಾವಾಗಲೂ ಈ ಯಜಮಾನ ನುಡಿಗಳು ನಿರಾಕರಿಸುತ್ತಿದ್ದವು ಎಂಬುದು ಗಮನಾರ್ಹ. ಬೌದ್ಧಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಅನನ್ಯತೆಯ ನೆಲೆಗಳನ್ನು ಕಂಡುಕೊಳ್ಳುವಲ್ಲಿ ದೇಶೀನುಡಿಗಳು ಮಹತ್ವದ ಕೆಲಸ ಮಾಡುತ್ತವೆ ಎಂಬುದೇ ಇಂತಹ ನಿರಾಕರಣೆಗೆ ಕಾರಣವಾಗಿರಬೇಕು. ದೇಶೀ ಸಮುದಾಯಗಳ ಸಾಂಸ್ಕೃತಿಕ ಸ್ವಾಯತ್ತತೆ ನೆಲೆಗೊಳ್ಳಲು ಒತ್ತಾಸೆಯಾಗುವ ಯಾವುದೆ ಬೆಂಬಲವನ್ನು ಯಜಮಾನ ಸಮುದಾಯಗಳು ಕೊಡಲಾರವು. ಇಲ್ಲಿ ನುಡಿಯ ಹಕ್ಕು ಇಲ್ಲ ಆಯ್ಕೆಯ ನಿಲುವುಗಳು ಕೇವಲ ಪ್ಲೇ-ಟೆಕ್ಸ್ಟ್ ಆಗಿರುತ್ತವೆ. ಅವು ಆಚರಣೆಯ ಭಾಗವಾಗುವುದೇ ಇಲ್ಲ. ಇದುವರಗೆ ಚರ್ಚಿಸಿದ ಈ ವಾದಗಳು ತಾತ್ವಿಕವಾಗಿ ಇಲ್ಲ ಒಂದು ಸಿದ್ಧಾಂತವಾಗಿ ಸರಿಯಾಗಿಯೇ ಕಾಣಿಸುತ್ತವೆ. ಆದರೆ ಈ ವಾದಗಳ ನೆಲೆಯಿಂದ ಹುಟ್ಟುವ ವಿಮರ್ಶಾ ಮಾದರಿಗಳು ಎದುರಿಸಬಹುದಾದ ದೇಶೀಯತೆಯ ಸವಾಲುಗಳೇನು? ಎಂಬ ಕೇಳ್ವಿಯ ಹೊಣೆಗಾರಿಕೆಯೇ ಇಲ್ಲಿ ಗೈರು ಹಾಜರಾಗಿರುತ್ತದೆ. ಹಾಗಾಗಿ ದೇಶೀಯತೆ ಎಂಬ ಚಿಂತನಾಕ್ರಮ ಬದಲಿ ಮಾದರಿಯಾಗಿ ಬೆಳೆದು ಬಂದಿದೆ. ಸರಿಯೇ, ದೇಶೀನುಡಿ ಹಾಗೂ ವಸಾಹತುಶಾಹಿ ನುಡಿಗಳ ನಡುವೆ ಸಂಘರ್ಷದ ನೆಲೆಯಿತ್ತು ಎನ್ನುವ ಕಡೆಗೆ ಈ ಚರ್ಚೆಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಆದರೆ ಅಂತಹ ಸಂಘರ್ಷವನ್ನು ಪ್ರತಿರೋಧಿಸುವ ದೇಶೀಯತೆಯ ಹಾದಿಗಳಾವುವು ಎಂಬುದನ್ನು

ಕಂಡುಕೊಳ್ಳುವಲ್ಲಿ ವಸಾಹತ್ತೋತ್ತರ ಚಿಂತನಾ ಮಾದರಿ ಸೋತಿದೆ. ನಮ್ಮ ಎಷ್ಟೋಂದು ಮಂದಿ ವಿಮರ್ಶಕರು ಹುಮ್ಮಸ್ಸಿನಿಂದ ಈ ವಸಾಹತ್ತೋತ್ತರ ಚಿಂತನಾ ಮಾದರಿಯಿಂದ ಕನ್ನಡ ವಿಮರ್ಶೆಯನ್ನು ಮಾಡಿದ್ದಾರೆ. ಆದರೆ ಕನ್ನಡತನ/ದೇಶೀಯತೆಯನ್ನು ಗುರುತಿಸುವಲ್ಲಿ ಇವರಿಗೆ ಯಾವುದೇ ಗೆಲವು ಸಿಕ್ಕಿಲ್ಲ. ಕಾರಣವಿಷ್ಟೇ, ಇವರು ವಸಾಹತುಶಾಹಿಗೆ ಎದುರಾಗಿ ತಮ್ಮ ವಿಮರ್ಶಾ ಮಾದರಿ ಹಾಗೂ ಹತ್ಯಾರಗಳನ್ನು ರೂಪಿಸಿಕೊಂಡರೇ ಹೊರತು ಕನ್ನಡದ ಸಂವೇದನೆ ಹಾಗೂ ಸ್ವಂತಿಕೆಯನ್ನು ಗುರುತಿಸುವ ಇರಾದೆ ಈ ವಸಾಹತೋತ್ತರ ಚಿಂತನೆಗೆ ಒಗ್ಗಿಕೊಂಡವರ ಗುರಿಯಾಗಿರಲಿಲ್ಲ. ಏಕೆಂದರೆ, ಈ ಆಲೋಚನಾ ಕ್ರಮ ನಮ್ಮೊಳಗಿಂದ ಬಂದುದಲ್ಲ. ಫ್ರಾನ್ಸ್ ಫ್ಯಾನನ್, ಎಡ್ವರ್ಡ್ ಸೈದ್, ಮನೋನಿ ಅವರ ಚಿಂತನೆ ಹಾಗೂ ತಾತ್ವಿಕ ಚೌಕಟ್ಟುಗಳಿಂದ ಈ ವಸಾಹತೋತ್ತರ ಚಿಂತನೆ ರೂಪುಗೊಂಡಿರುವುದೇ ನಮ್ಮ ಕನ್ನಡದ ದೇಶೀಯತೆಯ ಚೌಕಟ್ಟನ್ನು ಕಟ್ಟಿಕೊಳ್ಳುವಲ್ಲಿ ಅಡ್ಡಿಯಾಗಿದೆ. ಅನ್ಯಮಾದರಿಗಳನ್ನು ಅನಾಮತ್ತಾಗಿ ಎರವಲು ಪಡೆಯುವುದರಿಂದ ನಮ್ಮದೇ ತಾತ್ವಿಕ ಚೌಕಟ್ಟು ಹಾಗೂ ಆಲೋಚನಾ ಕ್ರಮಗಳನ್ನು ರೂಪಿಸಿಕೊಳ್ಳಲು ತೊಡಕುಗಳು ಉಂಡಾಗುತ್ತವೆ. ಇಂತಹ ಅಪಾಯವನ್ನು ಗುರುತಿಸದೇ ಹೋಗಿದ್ದಕ್ಕೆ ಏನು ಕಾರಣವೆಂದರೆ, ಇದಕ್ಕೆ ಸಾಂಸ್ಕೃತಿಕ ಅರಿವು ಹಾಗೂ ಎಚ್ಚರದ ಕೊರತೆಯೇ ಕಾರಣವಾಗಿರುತ್ತದೆ.

ಕನ್ನಡತನವೆಂಬ ಅಂತಃಸತ್ವ ಹಾಗೂ ದೇಶೀಯತೆ: ಪಂಪ ತನ್ನ ಕಾವ್ಯದ ವಸ್ತುವನ್ನು ಮಹಾಭಾರತ ಹಾಗೂ ಜಿನಸೇನನ ಮೂಲ ಪುರಾಣದಿಂದ ಪಡೆದಿದ್ದರೂ, ತನ್ನ ಆ ಎರಡೂ ಕಾವ್ಯಗಳಲ್ಲಿ ಕನ್ನಡತನವನ್ನೇ ಮೆರೆದಿದ್ದಾನೆ. ಇಲ್ಲಿ ಕನ್ನಡತನ ಎನ್ನುವುದ ಕೇವಲ ನುಡಿ ಮಾತ್ರವಲ್ಲ. ಅದು ಅನುಭವ ಹಾಗೂ ಸಂವೇದನೆಯ ನೆಲೆಯೂ ಆಗಿದೆ. ಇಂತಹ ಸಂವೇದನೆಯು ಹೇಗೆ ಕನ್ನಡ ಸಂಸ್ಕೃತಿಯ ಆಕಾರವನ್ನು ಪಡೆಯುತ್ತೆ ಎಂಬುದು ಗಮನಾರ್ಹ ಸಂಗತಿ. ನಿರೂಪಣಾ ಮಾದರಿ, ನುಡಿಯೊಡ್ಡುವ ಸ್ಟೈಲ್ ಹಾಗೂ ಕಥನ ಕಟ್ಟುವ ಬಗೆಗಳೂ ಕೂಡ ಕನ್ನಡದ್ದವೇ ಆಗಿವೆ. ಈ ನಲ್ಬರಹಗಳ ಒಡಲಿನಲ್ಲಿ ಹುದುಗಿರುವ ತಿಳಿವು ಏನನ್ನು ಹೇಳುತ್ತೆಂಬುದು ಮಹತ್ವದ ಸಂಗತಿಯಾಗಿದ್ದರೂ, ಕೇವಲ ಅದನ್ನೊಂದೇ ದೇಶೀಯತೆಯ ಗುಣವನ್ನಾಗಿ ಪರಿಗಣಿಸಲಾಗದು. ಅನುಭವ ಸಾಮಗ್ರಿ, ಸಂವೇದನೆ, ನಿರೂಪಣಾ ಕ್ರಮ ಹಾಗೂ ಅವುಗಳು ಪಡೆದುಕೊಳ್ಳುವ ಸಾಂಸ್ಕೃತಿಕ ಆಕಾರಗಳ ನೆರವಿನಿಂದ ದೇಶೀಯತೆಯನ್ನು ಬಣ್ಣಿಸಲಾಗುತ್ತದೆ. ಕನ್ನಡದ ಈ ಅಂತಃಸತ್ವ ಹಾಗೂ ಅನನ್ಯತೆಯ ನೆಲೆಗಳ ನಡುವೆ ನಿರಂತರವಾದ ಸಾತತ್ಯ / ಚಲನಶೀಲತೆಯನ್ನು ಕಾಣಬಹುದು. ಕವಿರಾಜಮಾರ್ಗಕಾರನಿಂದ ಪಂಪನವರೆಗೆ, ಪಂಪನಿಂದ ವಚನ ಚಳುವಳಿಗೆ, ಹರಿಹರನವರೆಗೆ ಅಲ್ಲಿಂದ ತತ್ವಪದಕಾರರವರೆಗೆ ಹಾಗೂ ಅವರಿಂದ ಬೇಂದ್ರೆ, ದೇವನೂರರವರೆಗೆ ಮಾತ್ರವಲ್ಲದೆ ಇವತ್ತು ಮತ್ತು ಯಾವತ್ತು ಕನ್ನಡದ ಈ ಜೀವಸೆಲೆ ಹರಿಯುತ್ತಲೇ ಇರುತ್ತದೆ. ಈ ಬಗೆಯ ತಿಳಿವಿನ ನೆಲೆಗಳನ್ನೂ ದೇಶೀಯತೆ ಎಂದು ಕರೆಯಬಹುದು. ಈ ಪ್ರಕ್ರಿಯೆಯಲ್ಲಿಯೇ ಅಧಿಕೃತ ಸಾಹಿತ್ಯ ವರ್ಸಸ್ ಬಾಯ್ದೆರಯ ಸಾಹಿತ್ಯ ಎಂಬ ಸೀಳುಗಳನ್ನೂ ಗುರುತಿಸಲಾಗಿದೆ. ಸಾಂಸ್ಕೃತಿಕ ರಾಜಕಾರಣದ ಹುನ್ನಾರದಿಂದ ಇಂತಹ ಸೀಳುಗಳನ್ನು ನಿರ್ಮಿಸಲು ಸಾಧ್ಯವಾಗಿದೆ. ಮಾರ್ಗ ಮತ್ತು ದೇಶೀಯಂತಹ ಕಲ್ಪನೆಗಳು ಅವತಾರ ಪಡೆದಿರುವುದು ಕೂಡ ಇಂತಹ ಕಾರಣಗಳಿಂದಲೇ. ಹೊಸಗಾಲದ ಸಾಹಿತ್ಯವು ಬರೆಹ ಹಾಗೂ ಬಾಯ್ದೆರೆಯ ಸಾಹಿತ್ಯಗಳ ನಡುವೆ ದೊಡ್ಡ ಕಂದರವನ್ನೇ ಹುಟ್ಟುಹಾಕಿ, ಸಾಹಿತ್ಯದಲ್ಲಿ ಮೇಲು-ಕೀಳು ಎಂಬ ಡೈಕಾಟಮಿಯನ್ನು ರೂಪಿಸಲಾಗಿದೆ. ಕನ್ನಡತನವೆಂಬ ಜೀವಸೆಲೆಯನ್ನು ಯಾವಾಗಲೂ ಚಲನಶೀಲಗೊಳಿಸುವ ಬಾಯ್ದೆರೆಯ ಸಾಹಿತ್ಯವನ್ನೇ ಅವೈದಿಕ, ಜಾನಪದೀಯ, ಶ್ರೇಷ್ಠವಲ್ಲದ್ದು ಎಂಬಿತ್ಯಾದಿಯಾಗಿ ಬಣ್ಣಿಸಲಾಗಿದೆ.ಈ ಬಾಯ್ದೆರೆಯ ಸಾಹಿತ್ಯವನ್ನು ಹೊರಗಿಟ್ಟು ಬೆಳೆದು ಬಂದ ಬರೆಹ ಸಾಹಿತ್ಯವನ್ನು ಮಾತ್ರ ಅಧಿಕೃತ ಸಾಹಿತ್ಯವೆಂದು ತಿಳಿಯಲಾಗಿದೆ. ಇಂತಹ ಸಾಂಸ್ಕೃತಿಕ ಸಂಚುಗಳಿಂದ ದಿಟವಾದ ದೇಶೀಯತೆಯನ್ನೇ ನಿರಾಕರಿಸುವ ಬಗೆಗಳು ಗಟ್ಟಿಯಾಗಿವೆ. ಕಾರಣ- ಬರೆಹ ಸಾಹಿತ್ಯವು ಅಧಿಕಾರದ ಜಾಗವನ್ನು ಪಡೆದುಕೊಂಡು ಪ್ರಧಾನ ಪರಂಪರೆಯಾಗಿ ನೆಲೆ ನಿಂತಿದೆ. ತನ್ನತನದ ದಿಟ್ಟ ಚಹರೆಗಳನ್ನು ಹೊರಡಿಸುವ ಬಾಯ್ದೆರೆಯ ಸಾಹಿತ್ಯವು ಕೀಳು, ಅಧೀನ ಪರಂಪರೆಯಾಗಿ ರೂಪಗೊಂಡಿದೆ. “ಮಾನವ ಜನಾಂಗದ ಅಸ್ತಿತ್ವವನ್ನು ನುಡಿ ನಿರ್ಧರಿಸಿದರೆ, ನಾಗರಿಕ ಸಮುದಾಯ ಅಸ್ತಿತ್ವವನ್ನು ಬರೆಹ ನಿರ್ಧರಿಸುತ್ತದೆ” ಎಂದು ಸಾಮಾಜಿಕ ನುಡಿಯರಿಗ ಪೀಟರ್ ಡೆನಿಯಲ್ಸ್ 1992:2 ಅವರು ಹೇಳುತ್ತಾರೆ. ಬರೆಹ ಪರಂಪರೆಯೆಂದರೆ ಶ್ರೇಷ್ಠವಾದದ್ದು. ಸುಸಂಸ್ಕೃತವಾದದ್ದು ಹಾಗೂ ನಾಗರಿಕತೆಯ ಸೂಚಕವೆಂದು ಭ್ರಮಿಸಲಾಗಿದೆ. ಬರೆಹ ಪರಂಪರೆಯನ್ನು ಹೊಂದಿರುವುದೇ ಇಂತಹ ಭ್ರಮೆಗಳಿಗೆ ಕಾರಣವೆಂಬುದು ನಿಚ್ಚಳವಾಗಿ ಕಾಣುತ್ತದೆ. ಕನ್ನಡ ಸಾಹಿತ್ಯದ ವಸ್ತು ಹಾಗೂ ಅಭಿವ್ಯಕ್ತಿಯ ಮಾದರಿಗಳು ಸಂಸ್ಕೃತ ಸಂಗಾತದಿಂದ ಸಿಕ್ಕಿವೆ ಎಂಬ ಮಾತು ಗಟ್ಟಿಯಾಗಿಯೇ ಕೇಳುತ್ತದೆ. ಎತ್ತುಗೆಗಾಗಿ ಪಂಪನ ಕಾವ್ಯದ ಎರಡು ವಿನ್ಯಾಸಗಳಾದ “ಪೊಸಬಗೆ” ಮತ್ತು ‘ಮೃದುಬಂಧ’ ಇವುಗಳು ಕ್ರಮವಾಗಿ ಕಾಳಿದಾಸನ ‘ವಾಕ್’ ಮತ್ತು ‘ಅರ್ಥ’ ಭೂಮಿಕೆಗಳಿಗೆ ಸಂವಾದಿಯಾಗಿ ನಿಲ್ಲುತ್ತವೆ. ಕನ್ನಡ ಸಾಹಿತ್ಯ ಪ್ರತಿಭೆಯ ಸ್ವರೂಪವನ್ನು ಕುರಿತು ಮಾತನಾಡುವವರು, ಕುರ್ತುಕೋಟಿಯವರನ್ನೂ ಒಳಗೊಂಡು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಕನ್ನಡ ಹಾಗೂ ಸಂಸ್ಕೃತ ಸಂವೇದನೆಗಳ ನಡುವಣ ವಿಕಲ್ಪಭಿನ್ನತೆಗಳನ್ನು ಗುರುತಿಸುವಲ್ಲಿ ಬಹುತೇಕ ಕನ್ನಡ ವಿಮಾರ್ಶಾ ಲೋಕ ಸೋತಿದೆಯೆಂದೇ ಹೇಳಬೇಕು. ಹೊಸಗನ್ನಡ ಕಾವ್ಯದ ಮೇಲೆ ತತ್ವಪದಕಾರರು ಮಾಡಿದ ಪ್ರಭಾವವನ್ನು ಗುರುತಿಸಿಯೂ ಗುರುತಿಸದಂತೆ ನಟಿಸಲಾಗಿದೆ. ಬಿ.ಎಂ.ಶ್ರೀಯವರ ‘ಇಂಗ್ಲಿಷ್

ಗೀತೆ'ಗಳಿಂದ ಕನ್ನಡ ದೇಶೀ ಕಾವ್ಯದ ನೆಲೆಗಳನ್ನು ಇಂಗಿಸುವ ಹುನ್ನಾರ ನಡೆದರೂ, ಅದುವೇ ಹೊಸಗನ್ನಡ ಕಾವ್ಯಕ್ಕೆ ಬೆಳಕಿನ ಕುಡಿ ಎನ್ನುವಂತೆ ಬೀಗಲಾಗಿದೆ. ಲೋಕಗ್ರಹಿಕೆ ಮತ್ತು ದೇಶೀ ನೆಲೆಗಳ ನಡುವೆ ಇರುವ ನಂಟಸ್ತಿಕೆಯನ್ನೂ ಕಡೆಗಣಿಸಲಾಗಿದೆ. ಇದಕ್ಕೆ ಕಾರಣಗಳು ನಿಚ್ಚಳವಾಗಿವೆ. ಅವೇನೆಂದರೆ- ಸಂಸ್ಕೃತ ಇಲ್ಲ. ಇಂಗ್ಲಿಷಿನ ಪ್ರಾಬಲ್ಯವನ್ನೇ ಸಾಂಸ್ಕೃತಿಕ ಕೊಡು-ಕೊಳ್ಳುವಿಕೆಯ ಮಾದರಿಗಳೆಂದು ನಂಬಿಸಲಾಗಿದೆ ಹಾಗೂ ಇಂತಹ ನಿಲುವುಗಳನ್ನೇ ಸಮನ್ವಯದ ನೆಲೆಗಳನ್ನಾಗಿಯೂ ಗ್ರಹಿಸಲಾಗಿದೆ. ಹಾಗಾಗಿ ಕನ್ನಡತನ ಇಲ್ಲ ದೇಶೀಯತೆಯ ಪ್ರಶ್ನೆಗಳನ್ನು ಎದುರಾಗುವುದೆಂದರೆ ಸಂಸ್ಕೃತ / ಇಂಗ್ಲಿಷಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಇಲ್ಲ ಅಂತಹ ನುಡಿಗಳಿಂದ ಸಾಹಿತ್ಯಕ ಮಾದರಿಗಳನ್ನು ಅನಾಮತ್ತಾಗಿ ಅನುಕರಿಸುವುದಾಗಿದೆ. ಇದು ಕನ್ನಡ ಸಾಹಿತ್ಯ ಎದುರಿಸುತ್ತಿರುವ ಬಿಕ್ಕಟ್ಟಾಗಿ ನಮಗೆ ಯಾವತ್ತೂ ಅನ್ನಿಸಲಿಲ್ವೇ? ಯಾಕೆ? ದೇಶೀಯತೆ ಎಂದರೆ ಅದು ಕೇವಲ ಸಾಪೇಕ್ಷಿತ ನೆಲೆಯಿಂದ ಗುರುತಿಸುವಂತಹದೇ? ಅದು ಸಂಸ್ಕೃತಿಗಳ ಚಹರೆಗಳನ್ನು ಬಿಂಬಿಸುವ ಮಾದರಿಯಲ್ವೇ?

ಸಾಹಿತ್ಯದ ಸ್ವಂತಿಕೆಯ ಸವಾಲುಗಳು, ಸಮುದಾಯದ ಸ್ವಂತಿಕೆಯ ಸವಾಲುಗಳೂ ಆಗಿರುತ್ತವೆ. ಆದರೆ ಯಜಮಾನ ಸಮುದಾಯದ ಶ್ರೇಣೀಕರಣದ ತೀವ್ರತೆ ಹೆಚ್ಚಾಗಿ, ಅಧಿಕಾರ ಸಂಬಂಧಗಳು ಮುಂಚೂಣಿಗೆ ಬಂದಾಗ ಸ್ವಂತಿಕೆಯ ಪ್ರಶ್ನೆಗಳ ಸ್ವರೂಪವೇ ಬೇರೆಯಾಗಿಬಿಡುತ್ತವೆ. ಕನ್ನಡತನ ಎನ್ನುವುದು ಅದು ದೇಶೀಯತೆಯನ್ನು ಒಳಗೊಂಡು ಮಾರ್ಗದತ್ತ ಹೊರಳುವ ಕ್ರಿಯೆಯೆಂದು ನಂಬಿಸಲಾಗಿದೆ. ಇದೇ ಮಾತನ್ನು ಪಂಪನ ಕಾವ್ಯವನ್ನೂ ಕುರಿತು ಹೇಳಲಾಗುತ್ತದೆ. ದಿಟವಾಗಿಯೂ ಇದು ಯಜಮಾನ ನುಡಿಯ ಪ್ರಾಬಲ್ಯವನ್ನು ಒಪ್ಪಿಕೊಳ್ಳುವ ಬಗೆಯೆಂದೇ ಹೇಳಬೇಕು. ಇಂತಹ ಬಿಕ್ಕಟ್ಟುಗಳಲ್ಲಿಯೂ ದೇಶೀಯತೆಯ ಮೂಲಕ ಸಂಸ್ಕೃತಿಯನ್ನು ಕಟ್ಟುವ ಇಲ್ಲ ಮರುರಚಿಸುವ ಹೊಣೆಗಾರಿಕೆಯನ್ನು ನಮ್ಮ ಹಲವು ಕವಿಗಳು ಹೊತ್ತಿರುವುದು ದಿಟ ಎತ್ತುಗೆಗಾಗಿ ಪಂಪ, ಅಲ್ಲಮ, ಹರಿಹರ, ಕುಮಾರವ್ಯಾಸ, ನಯಸೇನ ಮುಂತಾದ ಪೂರ್ವ ಕವಿಗಳೊಂದಿಗೆ ಬೇಂದ್ರೆ, ಕುವೆಂಪು, ಪುತಿನ, ದೇವನೂರ ಮುಂತಾದ ಸಮಕಾಲೀನ ಬರೆಹಗಾರರು ಸೇರಿದ್ದಾರೆ. ಮತ್ತೆ ಇನ್ನೂ ಕೆಲವು ಕವಿಗಳು ಮಾರ್ಗೀಯ ಸಂಸ್ಕೃತಿಯ ಮೂಲಕ ಕನ್ನಡ ಸಂಸ್ಕೃತಿಯನ್ನು ಕಟ್ಟುವುದೇ ತಮ್ಮ ಹೊಣೆಗಾರಿಕೆಯೆಂದು ತಿಳಿದಿದ್ದಾರೆ. ಹಾಗಾಗಿ ಸಂಸ್ಕೃತ-ಕನ್ನಡಗಳ ನಡುವಣ ತಿಕ್ಕಾಟವನ್ನು ಹೊಂದಾಣಿಕೆಯ ನೆಲೆಯಲ್ಲಿ ನೋಡುವ ಕ್ರಮಗಳು ಇಲ್ಲಿ ಮುಂಚೂಣಿಗೆ ಬಂದಿವೆ. ಎಲ್ಲ ಕಾಲಕ್ಕೂ ಅನ್ವಯಿಸುವ ಮಾನದಂಡಗಳು ನಮ್ಮಲ್ಲಿವೆ ಎಂದು ತಿಳಿದವರು ಯಾವ ಗೊಂದಲವನ್ನು ಎದುರಿಸುವುದಿಲ್ಲ ಕೆ.ವಿ.ಎನ್. ಇಂತಹ ಗೊಂದಲಗಳ ಪರಿವೇ ಇಲ್ಲದವರು ಅನ್ಯಮಾದರಿಗಳಿಗೆ ಅತಿ ಬೇಗ ಮಾರು ಹೋಗುತ್ತಾರೆ. ಬರೆಹಗಾರರು ತಮ್ಮ ಮೇಲಿನ ಅನ್ಯ ಮಾದರಿಗಳ ಒತ್ತಾಯವನ್ನು ಕೊಡಹಿದಾಗಲೇ ದೇಶೀಯತೆಯ ಪ್ರಜ್ಞೆಯನ್ನು ಗಳಿಸಿಕೊಳ್ಳಬಲ್ಲರು. ಇಂತಹ ಪ್ರಜ್ಞೆಯನ್ನು ಗಳಿಸಿಕೊಳ್ಳದ ಕಾರಣದಿಂದ ಮಾರ್ಗಕಾರನ ದಿಟವಾದ ಗುರಿಗಳನ್ನು ಅರಿಯುವಲ್ಲಿ ನಾವು ಸೋತಿದ್ದೇವೆ. ಕವಿರಾಜಮಾರ್ಗದ ಹುಡುಕಾಟ ಕನ್ನಡಕ್ಕೊಂದು ಕಾವ್ಯ ಭಾಷೆಯನ್ನು ರೂಪಿಸಿಕೊಡುವುದಾಗಿತ್ತು. ಆ ಕಾವ್ಯ ಭಾಷೆ ರಾಜಸ್ಥಾನದ ಮನ್ನಣೆಯ ಭಾಷೆಯೂ ಆಗಿರಬೇಕೆಂಬುದು ಕೃತಿಯ ಆಶಯ. ರಾಜ್ಯಮನ್ನಣೆಯ ಭಾಷೆ ಮತ್ತು ಸಾಹಿತ್ಯ – ಸಂಸ್ಕೃತಿಯ ಭಾಷೆಗಳು ಬೇರೆ ಬೇರೆಯಾಗಿರುವುದಿಲ್ಲ ಇವೆರಡರ ನಡುವೆ ವಿಚಿತ್ರ ಹೊಂದಾಣಿಕೆ ಇರುತ್ತದೆ. ಕೆ.ವಿ.ಎನ್. ಈ ಮಾತುಗಳು ಮೇಲಿನ ವಾದವನ್ನು ಬೆಂಬಲಿಸುತ್ತವೆ ಅಷ್ಟೇಯಲ್ಲ ದೇಶೀಯತೆಯ ಲಕ್ಷಣಗಳು ಕೇವಲ ನುಡಿಗೆ ಸಂಬಂಧಿಸಿದವುಗಳಲ್ಲ ಎಂಬ ದಿಟವನ್ನೂ ಸೂಚಿಸುತ್ತವೆ. ಕನ್ನಡ ಸಾಹಿತ್ಯವನ್ನು ಮುಖ್ಯವಾದ ಆಧಾರವನ್ನಾಗಿ ಇಟ್ಟುಕೊಂಡು ಒಂದು ಪರಂಪರೆಯನ್ನು ಕಲ್ಪಿಸುವ, ಅದರ ಬೆಳವಣಿಗೆಯ ವಿವಿಧ ಹಂತಗಳನ್ನು ಇಂದಿನ ಸಾಹಿತ್ಯದಲ್ಲಿ ಕಾಣುವ ಪ್ರಯತ್ನಗಳನ್ನು ನಾವೇಕೆ ಮಾಡಬಾರದು? ಎಂಬೀ ಕೆ.ವಿ.ಎನ್. ಅವರ ಕೇಳ್ವಿ ದೇಶೀಯತೆಯ ಪ್ರಜ್ಞೆಯನ್ನು ಬೆಳೆಸುವಲ್ಲಿ ಮಹತ್ವದ್ದಾಗಿದೆ. ಕಂಬಾರರು, ಶಿವಪ್ರಕಾಶರಂತಹ ಕವಿಗಳು ದೇಶೀ ಪುರಾಣ ಹಾಗೂ ಐತಿಹ್ಯಗಳಿಗೆ ಮರುಳುವ ಕ್ರಿಯೆಯು ಕನ್ನಡದ ವಿವೇಕ ಹಾಗೂ ಸಂವೇದನೆಯನ್ನು ರೂಪಿಸುವ ನೆಲೆಯಾಗಿದೆ ಎಂಬುದು ಗಮನಾರ್ಹ. ಇಂತಹ ಸಾಂಸ್ಕೃತಿಕ ರಾಜಕಾರಣವು ದೇಶೀಯತೆಯನ್ನು ಚಲನಶೀಲಗೊಳಿಸಬಲ್ಲದು. ಆದರೆ, ಸಾಂಸ್ಕೃತಿಕ ಆಕೃತಿಗಳು ಯಾರನ್ನು ಪ್ರತಿನಿಧಿಸುತ್ತವೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಎತ್ತುಗೆಗಾಗಿ ಕಂಬಾರರ ಸಾಹಿತ್ಯದಲ್ಲಿ ಊಳಿಗಮಾನ್ಯ ಸಂಸ್ಕೃತಿಯನ್ನು ಹೇಗೆ ವೈಭವಿಕರಿಸಲಾಗುತ್ತದೆ ಹಾಗೂ ಆ ನೆಲೆಗಳು ಯಾರನ್ನು ಪ್ರತಿನಿಧಿಸುತ್ತವೆ ಎಂಬ ಕೇಳ್ವಿಯು ಮುಖ್ಯವಾಗುತ್ತದೆ. ಬಾಯ್ದೆರೆಯ ಪರಂಪರೆಗೂ ಬರೆಹ ಪರಂಪರೆಗೂ ನಿಕಟ ನಂಟನ್ನು ಬೆಸೆಯಬೇಕಾಗುತ್ತದೆ. ಹಾಗೂ ಆ ನಂಟಸ್ತಿಕೆಗಳು ಸಾಮಾಜಿಕ ವಾಸ್ತವಗಳೊಂದಿಗೆ ಹೇಗಿರುತ್ತವೆ ಎಂಬುದನ್ನು ಮನಗಾಣಿಸಬೇಕಾಗುತ್ತದೆ. ಇಲ್ಲವಾದರೆ ಈ ಎರಡೂ ಪರಂಪರೆಗಳ ನಡುವಣ ಬಿರುಕು ಇನ್ನಷ್ಟು ಉಲ್ಬಣಗೊಳ್ಳುತ್ತದೆ. ಏಕಕಾಲಕ್ಕೆ ಹೊರಗಿನ ಸಂಗತಿಗಳ ಜೊತೆಗೆ ವಿರೋಧದ ನೆಲೆಗಳನ್ನು ರೂಪಿಸುವುದರೊಟ್ಟಿಗೆ, ಒಳಗಿನ ಸಂಗತಿಗಳ ಜೊತೆಗೂ ಪ್ರತಿರೋಧದ ಪ್ರತಿಮೆಗಳನ್ನು ರೂಪಿಸುವುದು ದೇಶೀ ಪ್ರಜ್ಞೆಯಲ್ಲಿ ಮುಖ್ಯವಾಗುತ್ತದೆ. ಕುವೆಂಪು ಅವರ 'ಜಲಗಾರ', 'ಶೂದ್ರ ತಪಸ್ವಿ' ಮುಂತಾದ ನಾಟಕಗಳಲ್ಲಿ ದೇವನೂರರ 'ಕುಸುಮಬಾಲೆ', 'ಅಮಾಸ' ಕತೆಗಳಲ್ಲಿ ಹಾಗೂ ಲಂಕೇಶರವರ 'ಸಂಕ್ರಾಂತಿ' ನಾಟಕಗಳಲ್ಲಿ ಇಂತಹ ಪ್ರತಿರೋಧದ ನೆಲೆಗಳು ನಿಚ್ಚಳವಾಗಿಕಾಣುತ್ತವೆ. ಆದರೆ ದೇಶೀಯ ವಸ್ತು ಹಾಗೂ ಆಶಯವನ್ನಿಟ್ಟುಕೊಂಡ ಕಂಬಾರರ ನಾಟಕ ಹಾಗೂ ಕಾವ್ಯದಲ್ಲಿ ಪ್ರತಿರೋಧಕ್ಕಿಂತ ಹೆಚ್ಚಾಗಿ ಸಮರ್ಪಣಾ ಭಾವವೇ ಸಬ್‌ಮಿಶನ್ ಎದ್ದು ಕಾಣುತ್ತದೆ. ಇಂತಹ ನಿಲುವುಗಳು ದೇಶೀಯತೆಯನ್ನು ಗುರುತಿಸುವ ಬಗೆಯಲ್ಲಿಯೇ ಗೊಂದಲವನ್ನು ಹುಟ್ಟಿಸುವುದಿಲ್ಲವೇ? ಸಾಹಿತ್ಯ ವಿಮರ್ಶೆ ಮೂಲಭೂತವಾಗಿ ಒಂದು ಸಾಂಸ್ಕೃತಿಕ ಆಚರಣೆ ಎಂಬುದನ್ನು ಮರೆಯಬಾರದು. ಅನುಭವ ಮತ್ತು ವಿಚಾರಗಳ

ನಡುವಣ ಹೊಂದಾಣಿಕೆಯನ್ನು ಅವಲಂಬಿಸಿ ಸಾಂಸ್ಕೃತಿಕ ಆಚರಣೆಯ ಬಗೆಗಳು ರೂಪತಾಳುತ್ತವೆ. ಇಂತಹ ರೂಪಗಳಿಗೆ ದೇಶಿರೂಪವನ್ನು ಲೇಪಿಸುವುದಲ್ಲ ಬದಲಾಗಿ ನಮ್ಮ ಅನುಭವಗಳನ್ನು ನಮ್ಮ ಸಾಂಸ್ಕೃತಿಕ ಆಚರಣೆಯ ರೀತಿಯಲ್ಲಿಯೇ ಅಭಿವ್ಯಕ್ತಿಸಿದರೆ ಮಾತ್ರ ಆ ಅನುಭವಗಳು ದೇಶಿರೂಪವಾಗಿ ಮೈದಾಳುತ್ತದೆ. ಈ ಕಾರಣಕ್ಕಾಗಿಯೇ ವಚನಗಳನ್ನು ದೇಶಿರೂಪಗಳೆಂದು ಗುರುತಿಸಲಾಗಿದೆ. ಇಲ್ಲದೇ ಹೋಗಿದ್ದರೆ ವಚನಗಳು ಕೇವಲ ಸಾಮಾಜಿಕ ಸುಧಾರಣೆಯ ನಿಲುವುಗಳಾಗಿ ಮಾತ್ರ ಇರುತ್ತಿದ್ದವು. ತತ್ವಪದಕಾರರ ರಚನೆಗಳು ಅಚ್ಚದೇಶೀ ಸಂಸ್ಕೃತಿಯ ಅಭಿವ್ಯಕ್ತಿಗಳಾಗಿಯೇ ಆಕೃತಿ ಪಡೆದಿದ್ದರೂ ಅವುಗಳು ಮಾರ್ಗಕ್ಕೆ ಹೊರತಾದ ರಚನೆಗಳಾಗಿದ್ದರಿಂದ, ಅವು ಯಾವತ್ತೂ ಮುಖ್ಯವಾಹಿನಿಗೆ ಬರಲೇ ಇಲ್ಲ. ಅಧಿಕಾರ ಸಂಬಂಧದ ನಿಲುವುಗಳು ಪರಂಪರೆಯ ಅಧಿಕೃತತೆಯನ್ನು ಗುರುತಿಸುವಲ್ಲಿ ಎಷ್ಟೊಂದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂಬುದು ನಮಗೆ ಈಗ ತಿಳಿದಿರುವ ಸಂಗತಿಯೇ ಸರಿ. ದೇಶೀ ಚರಿತ್ರೆಗೆ ವಿಮುಖವಾಗಿ ಕನ್ನಡ ಸಾಹಿತ್ಯ ಚರಿತ್ರೆ ಬೆಳೆದು ಬಂದಿದ್ದರಿಂದ, ಚರಿತ್ರೆಯ ಏಕರೂಪೀತನ ಹಾಗೂ ಏಕಮುಖಿ ಕಥನಗಳನ್ನು ಕಟ್ಟುವ ಮಾದರಿಗಳು ಕನ್ನಡ ಸಾಹಿತ್ಯದಲ್ಲಿ ಅಡಕವಾಗಿವೆ. ಇಂತಹ ಮಾದರಿಗಳನ್ನು ಒಡೆಯುವ ಮಾನದಂಡಗಳನ್ನು ದೇಶೀಯತೆ ಪ್ರಜ್ಞೆಯಿಂದ ಮಾತ್ರ ರೂಪಿಸಿಕೊಳ್ಳಲು ಸಾಧ್ಯ. ಹೊರಗಿನ ಪ್ರಭಾವಗಳಿಂದ ಸಾಂಸ್ಕೃತಿಕ ಸ್ವಂತಿಕೆಯನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬ ಬರಹಗಾರನಿಗೂ ದೇಶೀಯತೆಯ ಪ್ರಜ್ಞೆ ಅತ್ಯಂತ ಅಗತ್ಯ. ಈ ವಾದವನ್ನು ರಾಜೀವ್ ತಾರಾನಾಥ ಅವರ ಮುಂದಿನ ಮಾತುಗಳು ಬೆಂಬಲಿಸುತ್ತವೆ, 'ನನಗೆ ಹೆಚ್ಚು ಮಹತ್ವದ್ದೆಂದು ತೋರುವದು ಕನ್ನಡ ಸಂವೇದನೆಯೇ ಹೊರತು ಕನ್ನಡ ಭಾಷೆಯಲ್ಲ. ಸ್ವಂತದ ಸಾಂಸ್ಕೃತಿಕ ಪರಿಸರದಿಂದಲೇ ಹುಟ್ಟಿ ಬಂದ ಸೃಜನಶೀಲ ಶಕ್ತಿಯಷ್ಟೇ ಸತ್ಯ ಉಳಿದವುಗಳಲ್ಲ ಎಂದು ಹೇಳುವಂತಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನ್ನ ಸಂಸ್ಕೃತಿಯ ಪರಿಸರದಿಂದಲೇ ಹೆಚ್ಚು ಉತ್ಕಟವಾದ ಸಂವೇದನೆಯನ್ನು ಪಡೆದುಕೊಳ್ಳುತ್ತಾನೆ. ಕಾರಣವೇನೆಂದರೆ ಅವನ ಸಂಸ್ಕೃತಿ ಮಾತ್ರ ಅವನಿಗೆ ವ್ಯಾಪಕವಾದ, ಸಮಗ್ರವಾದ ಮತ್ತು ವೈವಿಧ್ಯಪೂರ್ಣವಾದ ಉದ್ದೀಪನ ಸಾಮಗ್ರಿಯನ್ನು ಒದಗಿಸಿ ಕೊಡಬಲ್ಲದು' ಈ ಮಾತುಗಳನ್ನು ಬೆಂಬಲಿಸುವ ಸಾಹಿತ್ಯಕ ಪುರಾವೆಗಳನ್ನು ಕನ್ನಡ ಸಾಹಿತ್ಯದಲ್ಲಿ ಕಾಣಬಹುದು. ಎತ್ತುಗೆಗಾಗಿ ಬೇಂದ್ರೆ, ಕುವೆಂಪು, ಪು.ತಿ.ನ, ಗೋರುರ, ಕೆ.ಎಸ್.ನ., ಲಂಕೇಶ, ತೇಜಸ್ವಿ, ದೇವನೂರ, ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಅಮರೇಶ ನುಗುಡೋಣಿ , ಗೀತಾ ನಾಗಭೂಷಣ, ನಾಗವೇಣಿ, ದು.ನಂ. ಬೆಳಗಲಿ ಮುಂತಾದವರ ಸಾಹಿತ್ಯದಲ್ಲಿ ಕನ್ನಡ ಸಮುದಾಯಗಳ ಸಂವೇದನೆ ಹಾಗೂ ಸಾಂಸ್ಕೃತಿಕ ಸ್ವಂತಿಕೆಯ ನೆಲೆಗಳನ್ನು ಕಾಣುವುದಷ್ಟೆಯಲ್ಲ, ಅಂತಹ ಚಹರೆಗಳು ನಿಚ್ಚಳವಾಗಿ ಪಡಿಮೂಡಿವೆ ಎಂದೇ ಹೇಳಬೇಕು. ಸಾಹಿತ್ಯದಲ್ಲಿ ಪಡಿಮೂಡಿದ ಕನ್ನಡತನವನ್ನು ಗುರುತಿಸುವ ವಿಮರ್ಶಾ ಮಾದರಿಗಳು ಮಾತ್ರ ಅನ್ಯ ಪ್ರಭಾವದಿಂದ ಕೂಡಿವೆ. ಇದೊಂದು ಸೋಜಿಗದ ಸಂಗತಿ. ಇವುಗಳ ನಡುವೆಯೂ ಕನ್ನಡತನವನ್ನು ಹಾಗೂ ಅದರ ಚಹರೆಗಳನ್ನು ಗುರುತಿಸುವ ವಿಮರ್ಶೆಗಳೂ ಬೆಳೆದುಬಂದಿವೆ ಎಂಬುದು ಗಮನಾರ್ಹ. ಎತ್ತುಗೆಗಾಗಿ- ಬೇಂದ್ರೆ, ಮುಳಿಯ ತಿಮ್ಮಪ್ಪಯ್ಯ, ರಾಜೀವ್ ತಾರಾನಾಥ, ಕೆ.ವಿ.ನಾರಾಯಣ, ತೇಜಸ್ವಿ, ಕೆ.ಜಿ.ನಾಗರಾಜಪ್ಪ. ಇವರೆಲ್ಲ ಅತ್ಯಂತ ಮುಖ್ಯವಾದವರು. ವಿಮರ್ಶೆಯನ್ನು ಹೊರತುಪಡಿಸಿ ಶಂಬಾ ಜೋಶಿ, ಷ.ಶೆಟ್ಟರ್, ಎಂ.ಎಂ.ಕಲಬುರ್ಗಿ, ಡಿ.ಎನ್.ಶಂಕರ ಭಟ್, ಕೆ.ವಿ.ನಾರಾಯಣ, ನೇಗಿನಾಳ, ಎಚ್.ಎಸ್.ಶ್ರೀಮತಿ, ರಹಮತ್ ತರೀಕೆರೆ ಮುಂತಾದವರೆಲ್ಲರೂ ದೇಶೀಯತೆಯ ಚಿಂತನೆಗಳನ್ನು ಬೆಳೆಸಿದ್ದಾರೆ.

ಇನ್ನೂ ಕೆಲವು ಮಾತುಗಳು: ಇಡೀ ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಪಂಪನ ಪ್ರೇರಣೆ ಎದ್ದು ಕಾಣುತ್ತದೆ. ಅಂದರೆ ಅದು ಯಾವಾಗಲೂ ಕನ್ನಡ ಸಂಸ್ಕೃತಿಯಲ್ಲಿ ಅಂತರನಿಹಿತವಾಗಿದೆ ಇನ್‌ಟ್ರಾನ್ಸಿಕ್ ಎಂದರ್ಥ. ಇಂತಹ ಅಪ್ಪಟ ನಂಬಿಕೆಗಳಿಗೇನೂ ಕೊರತೆಯಿಲ್ಲ. ಆದರೆ ಕನ್ನಡ ದೇಶೀಯತೆಯನ್ನು ರೂಪಿಸುವಲ್ಲಿ ಈ ಪ್ರೇರಣೆಯನ್ನು ಹೇಗೆ ಬಳಸಿಕೊಳ್ಳಲಾಗಿದೆ?ಹಾಗೂ ಸಂಸ್ಕೃತದೊಂದಿಗೆ ಹೋರಾಟ ಪಂಪನನ್ನು ಹಾಗೂ ಆ ವಿಚಾರಧಾರೆಯನ್ನು ಪ್ರತಿನಿಧಿಸಿದಂತಹ ವಚನಕಾರರು, ಹರಿಹರ, ಕುಮಾರವ್ಯಾಸ, ತತ್ವಪದಕಾರರು ಮುಂತಾದವರ ಸಾಹಿತ್ಯಕ ಮಾದರಿಗಳನ್ನು ಎಷ್ಟರಮಟ್ಟಿಗೆ ನಾವು ಹಿಂಬಾಲಿಸಿದ್ದೇವೆ? ಈ ಕೇಳ್ವಿಗಳು ತುಂಬಾ ಸುಲಭವಾಗಿ ತೋರಿದರೂ, ಅವುಗಳಿಗೆ ಬದಲುಗಳನ್ನು ಕಂಡುಕೊಳ್ಳುವುದು ಕಷ್ಟದ ಸಂಗತಿಯೇ ಸರಿ. ಕನ್ನಡ ಸಾಹಿತ್ಯ ಯಾವಾಗಲೂ ಸಂಸ್ಕೃತದೊಂದಿಗೆ ಹೋರಾಟ ನಡೆಸುತ್ತಲೇ ಬಂದಿದ್ದರಿಂದ ಈ ಕೇಳ್ವಿಗಳು ಅವುಗಳದೇ ಆದ ಮಹತ್ವವಿದೆ ಎಂಬುದನ್ನು ಮರೆಯುವಂತಿಲ್ಲ.

ಆದರೆ, ಹೊಸಗಾಲದ ಕನ್ನಡ ಸಾಹಿತ್ಯ ಸಂಸ್ಕೃತವನ್ನಷ್ಟೆ ಎದುರಿಸುವುದಲ್ಲದೆ, ವಸಾಹತುಶಾಹಿ ಪಾಬಲ್ಯದಿಂದ ಇಂಗ್ಲಿಷನ್ನು ಎದುರಿಸಬೇಕಾದ ಬಿಕ್ಕಟ್ಟು ಹುಟ್ಟಿಕೊಂಡವು. ಇಂಗ್ಲಿಷ್ ಮತ್ತು ಆಧುನಿಕತೆಗೆ ಎದುರಾಗಲೂ ಕನ್ನಡ ಸಾಹಿತ್ಯ ಕಂಡುಕೊಂಡ ಹಾದಿಗಳಾವುವು? ಹಾಗೂ ' ಹಿಂದ್ ಸ್ವರಾಜ್'ದಲ್ಲಿಯೇ ಗಾಂಧಿ ದೇಶೀಯತೆಯ ನೆಲೆಗಳನ್ನು ನಿಚ್ಚಳವಾಗಿ ತೋರಿಸಿದ್ದರೂ, ಆಧುನಿಕತೆಯನ್ನು ಎದುರಾಗುವ ಬಗೆಗಳನ್ನು ಕನ್ನಡ ವಿದ್ವತ್ ಲೋಕ ಕನ್ನಡ ಪರಂಪರೆಯಿಂದ ಪಡೆಯದಿದ್ದರೂ ಗಾಂಧಿಯವರಿಂದೇಕೆ ಪಡೆಯಲಿಲ್ಲ? ಇವರ ದೇಶೀಯತೆ ಕುರಿತ ಚಿಂತನೆಗಳನ್ನು ಕೇವಲ ಆದರ್ಶದ ಮಾದರಿಗಳಾಗಿಬಿಟ್ಟವೋ? ಇಲ್ಲ ಬೇಕಂತಲೇ ಅವರ ದೇಶೀಯತೆಯ ನಿಲುವುಗಳನ್ನು ಅಂಚಿಗೆ ಸರಿಸಲಾಯ್ತೆ? ಇಲ್ಲ ನಮ್ಮ ಸಾಂಸ್ಕೃತಿಕ ಸ್ವಾಯತ್ತತೆ ಹಾಗೂ ಸ್ವಂತಿಕೆಯನ್ನು

ಹಾದಿಗಳಾವುವು? ಹಾಗೂ 'ಹಿಂದ್ ಸ್ವರಾಜ್'ದಲ್ಲಿಯೇ ಗಾಂಧಿ ದೇಶೀಯತೆಯ ನೆಲೆಗಳನ್ನು ನಿಚ್ಚಳವಾಗಿ ತೋರಿಸಿದ್ದರೂ, ಆಧುನಿಕತೆಯನ್ನು ಎದುರಾಗುವ ಬಗೆಗಳನ್ನು ಕನ್ನಡ ವಿದ್ವತ್ ಲೋಕ ಕನ್ನಡ ಪರಂಪರೆಯಿಂದ ಪಡೆಯದಿದ್ದರೂ ಗಾಂಧಿಯವರಿಂದೇಕೆ ಪಡೆಯಲಿಲ್ಲ? ಇವರ ದೇಶೀಯತೆ ಕುರಿತ ಚಿಂತನೆಗಳನ್ನು ಕೇವಲ ಆದರ್ಶದ ಮಾದರಿಗಳಾಗಿ ಬಿಟ್ಟವೋ? ಇಲ್ಲ ಬೇಕಂತಲೇ ಅವರ ದೇಶೀಯತೆಯ ನಿಲುವುಗಳನ್ನು ಅಂಚಿಗೆ ಸರಿಸಲಾಯ್ತೆ? ಇಲ್ಲ ನಮ್ಮ ಸಾಂಸ್ಕೃತಿಕ ಸ್ವಾಯತ್ತತೆ ಹಾಗೂ ಸ್ವಂತಿಕೆಯನ್ನು ರೂಪಿಸಿಕೊಳ್ಳಲು ಇವರ ಚಿಂತನೆಗಳನ್ನು ಪೂರಕವಾಗಿರಲಿಲ್ಲವೇ? ಅವು ಕೇವಲ ರಾಜಕೀಯ ಚಳುವಳಿಗೆ ಮಾತ್ರ ಸಂಬಂಧಿಸಿದ್ದವೋ? ಎಂಬಿತ್ಯಾದಿ ಕೇಳ್ವಿಗಳು ನಮಗೆ ಇಲ್ಲಿ ಎದುರಾಗುತ್ತವೆ. ಇಂತಹ ಕೇಳ್ವಿಗಳಿಗೆ ಬದಲುಗಳನ್ನು ಕಂಡುಕೊಳ್ಳುವ ಚಿಂತನಾ ಮಾದರಿಯೊಂದು ಈಗ ರೂಪಗೊಳ್ಳುತ್ತಿದೆ. ಈ ಮಾದರಿಯನ್ನು 'ಕರ್ನಾಟಕ ಓದು' ಎಂದು ಕರೆಯಲಾಗಿದೆ.

ಫ್ರಾನ್ಜ್ ಫ್ಯಾನನ್ 'ದಿ ರೆಚ್ಡ್ ಆಫ್ ದ ಅರ್ಥ್', 'ಬ್ಲ್ಯಾಕ್ ಸ್ಕಿನ್ ಅಂಡ್ ವೈಟ್ ಮಾಸ್ಕ್; ಎಡ್ವರ್ಡ್ ಸೈದ್ 'ಓರಿಯಂಟಲಿಸಮ್' ಮನೋನಿ, ಎಲಿಯಟ್, ಡೆರಿಡಾ, ಫುಕೋ, ರೋಲಾ ಬಾರ್ಥ್, ಹೋಮಿಬಾಬಾ, ಗಾಯತ್ರಿ ಸ್ಪಿವಾಕ್ ಅವರ ತಿಳುವಳಿಕೆಗಳನ್ನು ಅನಾಮತ್ತಾಗಿ ಕನ್ನಡಕ್ಕೆ ಹೊಂದಿಸುವ ರೂಢಿಗಳು ಇಂಗ್ಲಿಷ್ ಪ್ರಾಧ್ಯಾಪಕರಿಂದ ಮೊದಲಾದವು. ಅವರು ತಮ್ಮ ಐಡೆಂಟಿಟಿ ಕ್ರೈಸಿಸನ್ನು ನೀಗಿಸಿಕೊಳ್ಳಲು ಇಂತಹ ಮಾದರಿಗಳನ್ನು ಅನುಸರಿದರೋ? ಇಲ್ಲ. ಕನ್ನಡ ಚಿಂತನಾ ಮಾದರಿಗಳನ್ನು ಕಟ್ಟಿಕೊಳ್ಳುವ ಕಸುವೇ ಇಲ್ಲವೆಂಬ ತೀರ್ಮಾನದಿಂದ ಇಂತಹ ಅನ್ಯಮಾದರಿಗಳನ್ನು ಅನುಸರಿಸುವ ಹಾದಿ ಹಿಡಿದರೋ? ಎಂಬ ಅನುಮಾನಗಳು ಕಾಡುತ್ತವೆ. ಈ ನಿಲುವುಗಳು ಅತ್ಯಂತ ಸಂಕೀರ್ಣವಾದವು ಅವುಗಳ ಸಂಕೀರ್ಣತೆಯನ್ನು ಅರಿಯಲು ಕನ್ನಡ ಸಾಂಸ್ಕೃತಿಕ ಚರಿತ್ರೆಯನ್ನು ಮರು ಓದಿಗೆ ಒಳಪಡಿಸಿದಾಗ, ದಾರಿಗಳು ಸಿಗುತ್ತವೆ ಎಂಬ ನಂಬಿಕೆ ನನಗಿದೆ. ಅದೇನೆಯಿರಲಿ ಈ ಕೇಳ್ವಿಗಳನ್ನು ಮುಂದಿಟ್ಟುಕೊಂಡು ಮರುಚಿಂತಿಸುವ ಅಗತ್ಯವಂತೂ ಇದೆ.

ಕರೋನ ಬೇನೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಕಷಾಯ

ಇಂದು ನಾವೆಲ್ಲರೂ ಕಂಗಾಲಾಗಿದ್ದೇವೆ. ಅಪ್ಪ, ನನಗೆ ಸೋಂಕಾದರೆ ಮಾಡುವುದೇನು? ನನ್ನನ್ನು ಹಿಡಿದು ಕೊಂಡು ಹೋಗಿ ಯಾವುದಾದರೋ ಒಂದು ಗಬ್ಬು ಆಸ್ಪತ್ರೆಗೆ ನೂಕಿ ಕೂಡಿ ಹಾಕಿದರೆ, ಮನೆಯವರನ್ನು ಆಚೆಯೇ ಬರಲು ಅಕ್ಕಪಕ್ಕದವರು ಬಿಡದಿದ್ದರೆ, ನಾನು ಮಾಡುವುದೇನು? ನಮ್ಮ ಕೋಲು ಮುತ್ತಜ್ಜಿಯವರು ತುಂಬಾ ಮುಂಚೆಯೇ ಇದಕ್ಕೆಲ್ಲಾ ಒಂದು ಮದ್ದನ್ನು ಕಂಡು ಹಿಡಿದ್ದಿದ್ದರು. ಅದರಿಂದಲೇ ಅವರು ತಮ್ಮ ಮಕ್ಕಳನ್ನು ಚೆನ್ನಾಗಿ ಸಾಕಿದರು. ಅವರಿಗೆ ತಿಳಿದಿದ್ದ ಬೇರು, ಬೀಜಗಳಿಂದ ಒಂದು ಕಷಾಯವನ್ನು ಮಾಡಿಕೊಂಡಿದ್ದರು. ಆದರೆ ಅವರ ಮರಿ ಮಕ್ಕಳಾದ ನಾವು, ಆ ಡಾಕ್ಟರ್ ಈ ಡಾಕರ್ ಎಂದು ಹಾರಾಡಿ, ದುಡ್ಡು – ಬುದ್ಧಿ – ಮೈ ಎಲ್ಲವನ್ನೂ ಕಳೆದು ಕೊಳ್ಳುತ್ತಿದ್ದೇವೆ. ನಾವು ನಮ್ಮ ಕೋಲು ಮುತ್ತಜ್ಜಿಯನ್ನೇ ಹಿಂಬಾಲಿಸುತ್ತಿದ್ದೇವೆ.

ಈ ಕೆಳಗಿನ ಬೇರುಗಳನ್ನು ಮೊದ್ಲು ಒಟ್ಟು ಮಾಡಿ ಕೊಳ್ಳಿ

1. ಹಸಿ ಶುಂಠಿಬೇರು .... 250 ಗ್ರಾಂ
2. ಅರಿಶಿನ ಬೇರು .... 250 ಗ್ರಾಂ
3. ಕರಿ ಮೆಣಸು .... 100 ಗ್ರಾಂ
4. ಲವಂಗ ಪುಡಿ .... 50 ಗ್ರಾಂ
5. ಕಸ್ತೂರಿ ಅರಿಶಿನ........ 50 ಗ್ರಾಂ
6. ಅಶ್ವಗಂಧ ಪುಡಿ .... 100 ಗ್ರಾಂ
7. ತುಳಸಿಪುಡಿ .... 100 ಗ್ರಾಂ
8. ಹಸಿಕರಿ ಬೇವು .... 100 ಗ್ರಾಂ
9. ಬ್ರಾಹ್ಮಿಪುಡಿ........ 100 ಗ್ರಾಂ
10. ತುಳಸಿ – ಅಮೃತ ಬಳ್ಳಿ ರಸ .... 250 ಸಿಸಿ
11 ನಿಂಬೆ ಹಣ್ಣು........ 25

ಅ. ಮೊದಲು ನಿಂಬೆ ಹಣ್ಣುಗಳನ್ನು ಹಿಂಡಿ ರಸವನ್ನು ಒಂದು ಪಾತ್ರೆಯಲ್ಲಿ ಇಟ್ಟುಕೊಳ್ಳಿ.
ಆ. ಶುಂಠಿ ಹಾಗೂ ಅರಿಶಿನ ಬೇರುಗಳ, ಕರಿಬೇವು ಎಲೆಗಳನ್ನು ಚೆನ್ನಾಗಿ ತೊಳೆದು, ತುರಿಯಿರಿ.
ಇ. Mixer grinderನಲ್ಲಿ ಹಾಕಿ ಚೆನ್ನಾಗಿ ಈ ಬೇರುಗಳನ್ನು ನುಣ್ಣಗೆ ತಿರುವಿ.
ಈ. ತಿರುವಿದ ಈ ಸಾರವನ್ನು, ನಿಂಬೆರಸ, ತುಳಸಿ – ಅಮೃತ ಬಳ್ಳಿಯ ರಸದ ಜೊತೆಗೆ ಸೇರಿಸಿ.
ಉ. ಇದಕ್ಕೆ ಉಳಿದ ಕರಿ ಮೆಣಸು, ಬ್ರಾಹ್ಮಿ, ಅಶ್ವಗಂಧ, ತುಳಸಿ, ಕಸ್ತೂರಿ ಅರಿಶಿನ, ಲವಂಗ ಪುಡಿಗಳನ್ನು ಸೇರಿಸಿ ಈ ಒಲೆಯ ಮೇಲೆ ಕುದಿಸಿ.
ಊ. ಕುದಿದ ಕಷಾಯವನ್ನು ಆರಿಸಿ, ಮತ್ತೆ ಅದನ್ನು ಉತ್ತದೆ Mixer Grinderನಲ್ಲಿ ತಿರುವಿ.
ಎ. ತಿರುವಿದ ಕಷಾಯವನ್ನು ಮತ್ತೆ ಒಮ್ಮೆ ಕುದಿಸಿ.
ಏ. ಆರಿದ ಮೇಲೆ ಅದನ್ನು ಸೀಸೆಗಳಲ್ಲಿ ಹಾಕಿಡಿ refrigeratorನಲ್ಲಿ ಇಡಿ.

ಪ್ರತಿ ರಾತ್ರಿ 30 ಸಿಸಿಯಷ್ಟು ಕಷಾಯಕ್ಕೆ ಬಿಸಿ ನೀರನ್ನು ಬೆರೆಸಿ ಕುಡಿಯಿರಿ.

4 ಮಂದಿ ಇರುವ ಮನೆಯಲ್ಲಿ ಇಷ್ಟು ಕಷಾಯ 2 ತಿಂಗಳು ಸಾಕಾಗುತ್ತದೆ.

ಕಷಾಯವನ್ನು ಕುಡಿಯುವುದು ನಿಲ್ಲಿಸಬೇಡಿ. ಈ ಪಿಡುಗು ಮಾರಿ ಹೋಗುವವರೆಗೂ ಕುಡಿಯುತ್ತಿರಿ.

Date of Publication : 5th of every month RNI No. 040015 / 83
Regd. No. MNE / 93 / 2018-20 Date of Posting:5/6th of every month
at Mumbai Patrika Channel Sorting Office G.P.O.

ಮುಂಬರುವ ಕಾರ್ಯಕ್ರಮಗಳು

ಚಳಿಗಾಲದಲ್ಲಿ ಚರ್ಚೆ - ಹರಟೆ

ಶನಿವಾರ, ಡಿಸೆಂಬರ್ 19, 2020, ಬೈಗು 6-00ಕ್ಕೆ

ಪೂಜೆ ಮಾಡುವುದರಿಂದ ಫಲವೇನು?

What is the benefit of worship?

ನೀವು ಅಸೋಸಿಯೇಷನ್‌ಗೂ ಬರಬಹುದು, ಅಂತೆಯೇ google meet ನಲ್ಲಿಯೂ ಮಾತನಾಡಬಹುದು.

You may come to the Association or participate on Google Meet also.

Join with Google Meet-https://meet.google.com/joj-fvvi-ekv

Join with Facebook.com

https://www.facebook.com/MysoreAssociation

NEW YEAR'S EVE BINGE

December 31, 2020, at the Association

Gathering at Association : 7-00 pm

Games organised by the Youth wing

Dance of Owls by Youth wing

Light Meal at 8-15 pm

Songs, Jokes, Leg Pull

Welcome the New Year at 9-00 pm, at which time the New year arrives at the Date Line Disperse.

All participants must register at the Association before **29th Dec. 2020**

E-mail: mysoreassociation.mumbai@gmail.com

Tel : **2403 7065**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai – 400019. Tel: 24020 04647 / 2403 7065
Email : mysoreassociation.mumbai@gmail.com Website: www.mysoreassociation.in Printed by Aarti Art Printers, Fort, Mumbai – 1 Tel: 2266 3361